KACM300001452023

Presented on : 21-02-2023
Registered on : 21-02-2023
Decided on : 25-03-2026
Duration : 3 years, 1 months, 4 days

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಪ್ಪ.**

**:ಉಪಸ್ಥಿತರು:**

**ಶ್ರೀಮತಿ ನಂದಿನಿ.ಎಂ.ಎನ್, ಬಿ.ಎ. ಎಲ್.ಎಲ್.ಬಿ.,**

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ..ದಂ., ಕೊಪ್ಪ.

**ದಿನಾಂಕ 25 ನೇ ಮಾರ್ಚ್ 2026**

**ಕ್ರಿಮಿನಲ್ ಪ್ರಕರಣ ಸಂಖ್ಯೆಃ 98/2023**

| | | |
|---|---|---|
| *ಫಿರ್ಯಾದುದಾರರು* | ಃ | ರಾಜ್ಯದ ಪರ ಜಯಪುರ ಪೊಲೀಸ್ ಠಾಣೆ **(ಪ್ರತಿನಿಧಿಸುವವರು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)** |

**ವಿರುದ್ಧ**

| | | |
|---|---|---|
| ಆರೋಪಿತರು | 1 | ರಾಜು ಬಿನ್ ಲೇಟ್ ತಮ್ಮಯ್ಯ, ವಾಸ ಕಾಶೀಪುರ, ಶಿವಮೊಗ್ಗ |
| | 3 | ಮೊಹಮ್ಮದ್ ಅಜ್ಮಲ್ ಬಿನ್ ಮೊಹಮ್ಮದ್ ಇಲಿಯಾಜ್, ವಾಸ ಪೇನ್ಷನ್ ಮೊಹಲ್ಲ, ಹಾಸನ, |
| | 4 | ನಾಗರಾಜ ಬಿನ್ ಲೇಟ್ ರಂಗಪ್ಪ, ವಾಸ ವಿಜಯಪುರ, ಚಿಕ್ಕಮಗಳೂರು. |
| | 5 | ಸಾಬಿತ್ ಬಿನ್ ಉಹಸಾನ್ ಉಲ್ಲಾ ಷರೀಫ್, ವಾಸ ಹೊಸಲನೆ ರಸ್ತೆ, ಹಾಸನ, |
| | 7 | ಸಂದೀಪ ಯು.ಕೆ. ಬಿನ್ ಲೇಟ್ ಕರಿಬಸಪ್ಪ, ವಾಸ ವಿನೋಬನಗರ, ಶಿವಮೊಗ್ಗ |
| | 9 | ರವಿಕುಮಾರ ಬಿನ್ ಮಂಜುನಾಥ, ವಾಸ ವಿದ್ಯಾನಗರ, ಶಿವಮೊಗ್ಗ |
| | 10 | ರವಿ ಬಿನ್ ಲೇಟ್ ಗೆಜ್ಜಿರಾಜ್, ವಾಸ ವಿನೋಬನಗರ, ಶಿವಮೊಗ್ಗ |

Visit **ecourts.gov.in** for updates or download mobile app "**eCourts Services**" from Android or iOS

| | | |
|---|---|---|
| | 11 | ಶರತ್ ಪಿ.ಎಂ. ಬಿನ್ ಪಿ. ಮಾಲತೇಶ್ , ವಾಸ ವಿನೋಬನಗರ, ಶಿವಮೊಗ್ಗ |
| | 12 | ಆನಂದ ಡಿ. ಬಿನ್ ಧರ್ಮ, ವಾಸ ನಂದೀಪುರ, ಮೂಡಿಗೆರೆ ತಾಲ್ಲೂಕು. |
| | 13 | ಸುರೇಶ್ ಬಿನ್ ಲಕ್ಷ್ಮಣಗೌಡ, ಜನ್ನಾಪುರ, ಮೂಡಿಗೆರೆ ತಾಲ್ಲೂಕು. |
| | 14 | ಸುಂದರೇಶ ಬಿನ್ ಸುಬ್ಬೇಗೌಡ, ವಾಸ ಮೂಡಿಗೆರೆ ತಾಲ್ಲೂಕು. |
| | 17 | ಶ್ರೀಕಾಂತ್ ಬಿನ್ ಲೇಟ್ ಪುಟ್ಟೇಗೌಡ, ಬಣಕಲ್, ಮೂಡಿಗೆರೆ ತಾಲ್ಲೂಕು |
| | 18 | ಸಲೀಂ ಬಿನ್ ಉಮರಬ್ಬ, ಗಂಗನಕೊಪ್ಪ, ಹೊಸನಗರ ತಾಲ್ಲೂಕು |
| | 19 | ತ್ಯಾಗರಾಜ್ ಬಿನ್ ಲೇಟ್ ಶ್ರೀನಿವಾಸ, ವಾಸ ಹೊಸಮನೆ, ಶಿವಮೊಗ್ಗ |
| | 21 | ಉದಯಕುಮಾರ ಶೆಟ್ಟಿ ಬಿನ್ ಲೇಟ್ ಸಂಜೀವಶೆಟ್ಟಿ, ವಾಸ ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ |
| | 22 | ಶರತ್ ಬಿನ್ ಶಿವಣ್ಣಗೌಡ, ಕೆಸಗೋಡು, ವಾಸ ಮೂಡಿಗೆರೆ ತಾಲ್ಲೂಕು |
| | 23 | ವಿಕ್ಕಿ ಬಿನ್ ಲೇಟ್ ಲಕ್ಷ್ಮಣಗೌಡ, ವಾಸ ಕೊಟ್ಟಿಗೆಹಾರ, ಮೂಡಿಗೆರೆ ತಾಲ್ಲೂಕು. |
| | 24 | ಮಂಜು ಬಿನ್ ಲೇಟ್ ಬಾಬು, ವಾಸ ರಾಘವೇಂದ್ರ ನಗರ, ಕೊಪ್ಪ ತಾಲ್ಲೂಕು |
| | 29 | ಅಕ್ಬರ್ ಬಿನ್ ಲೇಟ್ ಅಬ್ಬುರ್ ಸಾಬ್, ವಾಸ ಬೇರುಕೊಡಿಗೆ, ಕೊಪ್ಪ ತಾಲ್ಲೂಕು |
| | 30 | ಪೂರ್ಣೇಶ್ ಅಲಿಯಾಸ್ ಪುರಿ ಬಿನ್ ಲೇಟ್ ಕೃಷ್ಣಪ್ಪ, ವಾಸ ಚಿಟ್ಟೆಮಕ್ಕಿ, ತೀರ್ಥಹಳ್ಳಿ |
| | 31 | ರವಿಕುಮಾರ್ ಬಿನ್ ಲೇಟ್ ಹಾಲೇಗೌಡ, ವಾಸ ಹೌಸಿಂಗ್ ಬೊರ್ಡ್, ಚಿಕ್ಕಮಗಳೂರು. |
| | 32 | ಮಂಜುನಾಥ್ ಬಿನ್ ಗಿಡ್ಡೇಗೌಡ, ವಾಸ ವಿನೋಬನಗರ, ಶಿವಮೊಗ್ಗ |
| | 34 | ಚೇತನ್ ಬಿನ್ ಲೇಟ್ ನಾಗೇಶ್, ಮೂಡಿಗೆರೆ ತಾಲ್ಲೂಕು |

Visit **ecourts.gov.in** for updates or download mobile app "**eCourts Services**" from Android or iOS

| | | |
|---|---|---|
| | 35 | ಆನಂತ ಬಿನ್ ಲೇಟ್ ಸುಬ್ಬರಾವ್,ಜಯಪುರ ಗ್ರಾಮ, ಕೊಪ್ಪ ತಾಲ್ಲೂಕು.<br>ಆರೋಪಿ 1, 7, 10, 11, 19, 32 ರವರ ಪರವಾಗಿ ಪ್ರತಿನಿಧಿಸುವವರು ಶ್ರೀ ಹೆಚ್.ಎಸ್.ಎ., ವಕೀಲರು, ಆರೋಪಿ-2, 13, 14, 17 ರವರ ಪರವಾಗಿ ಶ್ರೀ ಬಿ.ಎಸ್.ಎನ್., ವಕೀಲರು, ಆರೋಪಿ 4, 23 24 ರವರ ಪರವಾಗಿ ಶ್ರೀ ಎಂ.ಎನ್.ಎಸ್. ವಕೀಲರು, ಆರೋಪಿ-15, 20, 25, 30, 32 ರವರ ಪರವಾಗಿ ಶ್ರೀ ಎಂ.ಹೆಚ್.ಎಸ್.ಕೆ., ವಕೀಲರು, ಆರೋಪಿ-3 ರವರ ಪರವಾಗಿ ಶ್ರೀ ಕೆ.ಕೆಆರ್. ವಕೀಲರು, ಆರೋಪಿ-31 ರವರ ಪರವಾಗಿ ಶ್ರೀ ಎನ್ ಎಂ.ಸಿ. ವಕೀಲರು. |
| | | 2, 6, 8, 15, 16, 20, 25 ರಿಂದ 28, 33 ನೇ ಆರೋಪಿತರ ವಿರುದ್ದ ಪ್ರಕರಣವನ್ನು ಪ್ರತ್ಯೇಕಿಸಲಾಗಿದೆ. |

| | |
|---|---|
| ಘಟನೆ ನಡೆದ ದಿನಾಂಕ: | 23.09.2022 |
| ವರದಿ ಮಾಡಿದ ದಿನಾಂಕ: | 23.09.2022 |
| ಪ್ರಕರಣದ ಸ್ವರೂಪ | 80 ಕೆ.ಪಿ.ಆಕ್ಟ್ |
| ಆರೋಪಿತರನ್ನು ದಸ್ತಗಿರಿ ಮಾಡಿದ ದಿನಾಂಕ | ಆರೋಪಿತರು ಜಾಮೀನಿನ ಮೇಲೆ ಇರುತ್ತಾರೆ. |
| ಪಿಯಾರ್ದುದಾರರ ಹೆಸರು | ಶ್ರೀ ಗುಂಜನ್ ಆರ್ಯ |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | 07.11.2025 |
| ಸಾಕ್ಷಿ ವಿಚಾರಣೆ ಮುಗಿದ ದಿನಾಂಕ | 26.02.2026 |
| ತೀರ್ಪಿನ ದಿನಾಂಕ | 25.03.2026 |
| ನ್ಯಾಯಾಧೀಶರ ಅಭಿಪ್ರಾಯ | ಅಂತಿಮ ಆದೇಶಾನುಸಾರ |

*ಸಹಿ/- 25.03.2026*

(ಶ್ರೀಮತಿ ನಂದಿನಿ.ಎಂ.ಎನ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕೊಪ್ಪ

Visit **ecourts.gov.in** for updates or download mobile app "**eCourts Services**" from Android or iOS

**ತೀರ್ಪು**

ಠಾಣಾಧಿಕಾರಿಗಳು, ಜಯಪುರ ಪೊಲೀಸ್ ಠಾಣೆ, ಇವರು ಆರೋಪಿತರ ವಿರುದ್ದ 80 ಕೆ.ಪಿ. ಆಕ್ಟ್ ರಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿದ್ದಾರೆಂದು ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.

**2. ಪ್ರಕರಣದ ಸಂಕ್ಷಿಪ್ತ ವಿವರ:**

ದಿನಾಂಕ 23.09.2022 ರಂದು ರಾತ್ರಿ 9.10 ಗಂಟೆ ಸಮಯದಲ್ಲಿ ಜಯಪುರ ಪೊಲೀಸ್ ಠಾಣಾ ವ್ಯಾಪ್ತಿಯ ಜಯಪುರ ಪಟ್ಟಣದ ನಂದಿನಿ ಲೇಔಟ್‌ನಲ್ಲಿರುವ ಡಿಲೈಟ್ ಫುಲ್ ಹೋಮ್ ಸ್ಟೇನ ಕೆಳಅಂತಸ್ತಿನ 1 ನೇ ರೂಮಿನಲ್ಲಿ 1, 3 ರಿಂದ 5, 9 ರಿಂದ 14, 17 ರಿಂದ 19, 21 ರಿಂದ 24, 29 ರಿಂದ 32, 34 ಮತ್ತು 35 ನೇ ಆರೋಪಿತರು 2, 8, 15, 16, 20, 25 ರಿಂದ 28 ನೇ ಆರೋಪಿತರೊಂದಿಗೆ ಸೇರಿಕೊಂಡು ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಹಣವನ್ನು, ಮೊಬೈಲ್ ಗಳನ್ನು ಹಾಗೂ ಕಾರುಗಳನ್ನು ಪಣವಾಗಿಟ್ಟುಕೊಂಡು 52 ಇಸ್ಪೀಟ್ ಎಲೆಗಳ ಸಹಾಯದಿಂದ ಅದೃಷ್ಟದ ಇಸ್ಪೀಟ್ ಜೂಜಾಟವನ್ನು ಆಡುತ್ತಿದ್ದು, ಚಾಸಾ.1 ಶ್ರೀ ಗುಂಜನ್ ಆರ್ಯ, ರವರು ಚಾಸಾ.2 ರಿಂದ ಚಾಸಾ.11 ರವರೊಂದಿಗೆ ದಾಳಿ ಮಾಡಿ ಆರೋಪಿತರಿಂದ ಇಸ್ಪೀಟು ಜೂಜಾಟಕ್ಕೆ ಬಳಸಿದ 52 ಇಸ್ಪೀಟು ಎಲೆಗಳು, 5,54,140/- ರೂ. ನಗದು ಹಣ, ಒಟ್ಟು 39 ಮೊಬೈಲ್ ಫೋನ್ ಗಳು, ನಾಲ್ಕು ಕಾರುಗಳು, ಒಂದು ಮರದ ಫೈಬರ್ ಬಾಕ್ಸ್, ಮೂರು ಮರದ ಟೇಬಲ್ ಗಳು, ಎರಡು ಬ್ಲಾಂಕೆಟ್ ಮತ್ತು ಒಂದು ಬೆಡ್ ಶೀಟ್, 34 ಫೈಬರ್ ಚೇರ್ ಗಳನ್ನು ವಶಪಡಿಸಿಕೊಂಡು, ಆರೋಪಿತರು

ಹಣವನ್ನು, ಮೊಬೈಲ್ ಗಳನ್ನು, ಕಾರುಗಳನ್ನು ಪಣವನ್ನಾಗಿ ಇಟ್ಟುಕೊಂಡು ಅಂದರ್ -ಬಾಹರ್ ಇಸ್ಪೀಟ್ ಜೂಜಾಟ ಆಡುತ್ತಿದ್ದುದ್ದು ತನಿಖೆಯಿಂದ ದೃಢಪಟ್ಟಿರುವುದರಿಂದ ಜಯಪುರ ಪೊಲೀಸರು ಆರೋಪಿತರ ವಿರುದ್ಧ 80ರ ಕೆ.ಪಿ.ಆಕ್ಟ್ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಆರೋಪಿತರು ಮಾಡಿರುತ್ತಾರೆಂದು ದೋಷರೋಪಣೆ ಪತ್ರದಲ್ಲಿ ನಮೂದಿಸಿರುತ್ತಾರೆ.

**3.** ನಂತರ ಮಾನ್ಯ ನ್ಯಾಯಾಲಯಾವು ಆರೋಪಿತರ ವಿರುದ್ಧ ಸಂಜ್ಞೆಯನ್ನು ತೆಗೆದುಕೊಂಡು, ಆರೋಪಿತರಿಗೆ ಸಮನ್ಸ್ ಕಳುಹಿಸಲಾಗಿ, ಆರೋಪಿತರು ತಮ್ಮ ವಕೀಲರ ಮುಖಾಂತರ ಹಾಜರಾಗಿದ್ದು, ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ. ತದನಂತರ ಆರೋಪಿತರಿಗೆ ಅಭಿಯೋಜನೆ ಪರ ಹಾಜರುಪಡಿಸಿರುವ ದೋಷರೋಪಣಾ ಪತ್ರ ಮತ್ತು ಇತರೆ ದಾಖಲೆಗಳ ನಕಲುಗಳನ್ನು ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಡಿಯಲ್ಲಿ ಪೂರೈಸಲಾಯಿತು. ಬಳಿಕ 2, 6, 8, 15, 16, 20, 25 ರಿಂದ 28, 33 ನೇ ಆರೋಪಿತರು ನಿರಂತರವಾಗಿ ನ್ಯಾಯಾಲಯದ ಮುಂದೆ ಯಾವುದೇ ಸಹಕಾರಣ ಇಲ್ಲದೇ ಗೈರು ಹಾಜರು ಆಗಿದ್ದರಿಂದ ಅವರ ವಿರುದ್ಧ ಎನ್.ಬಿ. ಡಬ್ಲ್ಯೂ ಆದೇಶಿಸಿದ್ದು, ಆದರೂ ಸಹ ಸದರಿ ಆರೋಪಿತರು ನ್ಯಾಯಾಲಯದ ಮುಂದೆ ಹಾಜರಾಗಿರುವುದಿಲ್ಲ. ಆದ್ದರಿಂದ ಸದರಿ ಆರೋಪಿತರ ವಿರುದ್ಧ ಸಿ.ಸಿ. 1003/2025 ರಲ್ಲಿ ಪ್ರಕರಣವನ್ನು ಪ್ರತ್ಯೇಕಿಸಲಾಗಿದೆ. ತದನಂತರ 1, 3 ರಿಂದ 5, 7, 9 ರಿಂದ 14, 17 ರಿಂದ 19, 21 ರಿಂದ 24, 29 ರಿಂದ 32, 34 ಮತ್ತು 35 ನೇ ಆರೋಪಿತರಿಗೆ ಆರೋಪಣೆಯನ್ನು ರಚಿಸಿ, ಓದಿ ವಿವರಿಸಿ ಹೇಳಲಾಗಿ, ಸದರಿ ಆರೋಪಿತರು ತಾವು ಯಾವುದೇ ತಪ್ಪು

Visit **ecourts.gov.in** for updates or download mobile app "**eCourts Services**" from Android or iOS

ಮಾಡಿಲ್ಲವೆಂದೂ ಹಾಗೂ ತಮ್ಮ ವಿರುದ್ಧ ಮಾಡಲಾದ ಆರೋಪಗಳ ಬಗ್ಗೆ ವಿಚಾರಣೆಯಾಗಬೇಕೆಂದು ಕೋರಿಕೊಂಡಿದ್ದರಿಂದ ಸಾಕ್ಷಿಗಳ ವಿಚಾರಣೆಗಾಗಿ ಪ್ರಕರಣವನ್ನು ನಿಗದಿಪಡಿಸಲಾಯಿತು.

**4.** ಅಭಿಯೋಜನೆಯವರು ಆರೋಪಿತರ ವಿರುದ್ಧ ಮಾಡಿರುವ ದೋಷಾರೋಪಣೆಯನ್ನು ಸಾಬೀತುಪಡಿಸುವ ಸಲುವಾಗಿ ಪಿರ್ಯಾದಿದಾರರು ತಮ್ಮ ಪರವಾಗಿ 6 ಸಾಕ್ಷಿದಾರರನ್ನು ಪ್ರಾಸಾ-1 ರಿಂದ ಪ್ರಾಸಾ-6 ಎಂದು, ವಿಚಾರಣೆಗೊಳಪಡಿಸಿ 60 ದಾಖಲಾತಿಗಳನ್ನು ನಿಪಿ-1 ರಿಂದ ನಿಪಿ-60 ಎಂದು ಹಾಗೂ ಮುದ್ದೆಮಾಲು-1 ರಿಂದ 3 ಗಳನ್ನು ಗುರುತಿಸಿಕೊಂಡಿರುತ್ತಾರೆ.

**5.** ಆ ನಂತರದಲ್ಲಿ 1, 3 ರಿಂದ 5, 7, 9 ರಿಂದ 14, 17 ರಿಂದ 19, 21 ರಿಂದ 24, 29 ರಿಂದ 32, 34 ಮತ್ತು 35 ನೇ ಆರೋಪಿತರಿಗೆ ಭಾರತೀಯ ದಂಡ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಸಂಗ್ರಹಿಸಲಾಗಿ ಪ್ರಾಸಾ-1 ರಿಂದ ಪ್ರಾಸಾ-6 ರವರ ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ ಮತ್ತು ತಮ್ಮ ಪರವಾಗಿ ಹೇಳುವಂತ ಯಾವುದೇ ವಿಚಾರ ಇರುವುದಿಲ್ಲ ಮತ್ತು ಆರೋಪಿತರು ತಮ್ಮ ಪರವಾಗಿ ಯಾವುದೇ ಸಾಕ್ಷ್ಯದಾರರನ್ನು ವಿಚಾರಣೆಗಾಗಿ ಒಳಪಡಿಸುವುದಿಲ್ಲ ಎಂದು ನುಡಿದಿರುತ್ತಾರೆ.

**6.** ಅಭಿಯೋಜನೆಯವರ ಪರ ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಆರೋಪಿತರ ಪರ ವಕೀಲರ ವಾದಗಳನ್ನು ಆಲಿಸಲಾಯಿತು. ಈ ನ್ಯಾಯಾಲಯದ ವಿವೇಚನೆಗೆ ಉದ್ಭವಿಸುವ ಅಂಶಗಳು ಈ ಕೆಳಗಿನಂತಿವೆ:-

Visit **ecourts.gov.in** for updates or download mobile app "**eCourts Services**" from Android or iOS

**1) ದಿನಾಂಕ 23.09.2022 ರಂದು ರಾತ್ರಿ 9.10 ಗಂಟೆ ಸಮಯದಲ್ಲಿ ಜಯಪುರ ಪೊಲೀಸ್ ಠಾಣಾ ವ್ಯಾಪ್ತಿಯ ಜಯಪುರ ಪಟ್ಟಣದ ನಂದಿನಿ ಲೇಔಟ್‌ನಲ್ಲಿರುವ ಡಿಲೈಟ್ ಫುಲ್ ಹೋಮ್ ಸ್ಟೇನ ಕೆಳಅಂತಸ್ತಿನ 1 ನೇ ರೂಮಿನಲ್ಲಿ 1, 3 ರಿಂದ 5, 9 ರಿಂದ 14, 17 ರಿಂದ 19, 21 ರಿಂದ 24, 29 ರಿಂದ 32, 34 ಮತ್ತು 35 ನೇ ಆರೋಪಿತರು 2, 8, 15, 16, 20, 25 ರಿಂದ 28 ನೇ ಆರೋಪಿತರೊಂದಿಗೆ ಸೇರಿಕೊಂಡು ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಹಣವನ್ನು, ಮೊಬೈಲ್ ಗಳನ್ನು ಹಾಗೂ ಕಾರುಗಳನ್ನು ಪಣವಾಗಿಟ್ಟುಕೊಂಡು 52 ಇಸ್ಪೀಟ್ ಎಲೆಗಳ ಸಹಾಯದಿಂದ ಅದೃಷ್ಟದ ಇಸ್ಪೀಟ್ ಜೂಜಾಟವನ್ನು ಆಡುತ್ತಿದ್ದು, ಆದ ಕಾರಣ ಸದರಿ ಆರೋಪಿತರು ಕಲಂ 80 ಪೊಲೀಸ್ ಕಾಯ್ದೆ ರೀತ್ಯಾ ಶಿಕ್ಷಾರ್ಹ ಅಪರಾಧವೆಸಗಿರುತ್ತಾನೆಂಬುದನ್ನು ಅಭಿಯೋಜನೆಯ ಪಕ್ಷವು ನಿಸ್ಸಂಶಯವಾಗಿ ರುಜುವಾತು ಪಡಿಸುತ್ತದೆಯೆ?**

**2) ಯಾವ ಆದೇಶ?**

**7.** ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದೆ:

**ಅಂಶ 1 – ನಕಾರಾತ್ಮಕವಾಗಿ**

**ಅಂಶ 2 – ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ,**

**<u>ಕಾರಣಗಳು</u>**

**8. <u>ಅಂಶ ನಂ: 1-</u>** ಅಭಿಯೋಜನೆಯು ಚಾಸಾ-1/ಪ್ರಾಸಾ-1 ಶ್ರೀ ಗುಂಜನ್ ಆರ್ಯ, ಎ.ಎಸ್.ಪಿ. , ಇವರು ಪಿರ್ಯಾದುದಾರರಾಗಿದ್ದು ಕೃತ್ಯದ ಬಗ್ಗೆ ದಾಳಿ ನಡೆಸಿ ಸ್ಥಳ ಮತ್ತು ಅಮಾನತ್ತು ಮಹಜರ್ ಜರುಗಿಸಿ ಸಾಕ್ಷಿದಾರರಾಗಿದ್ದು, ಸದರಿ ಸಾಕ್ಷಿಯು

ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ23/09/2022 ರಂದು ರಾತ್ರಿ ಸುಮಾರು 8-00 ಗಂಟೆಗೆ ತಾನು ಜಯಪುರ ಗ್ರಾಮದ ಡಿಲೈಟ್ ಹೋಮ್ ಸ್ಟೇನಲ್ಲಿ ಅಕ್ರಮವಾಗಿ ಜೂಜಾಟ ಆಡುತ್ತಿದ್ದಾರೆಂದು ಮಾಹಿತಿ ಬಂದಿದ್ದು, ನಂತರ ತಾನು, ಚಾಸಾ 11 ಹಾಗೂ ವಾಹನ ಚಾಲಕರೊಂದಿಗೆ ರಾತ್ರಿ 8-15 ರ ಸಮಯಕ್ಕೆ ಕೊಪ್ಪವನ್ನು ಬಿಟ್ಟು ನಂತರ ಚಾಸಾ.4, ಚಾಸಾ.5 ಸದರಿಯವರಿಗೆ ಫೋನ್ ಮೂಲಕ ಕರೆ ಮಾಡಿ ಜಯಪುರ ಬಸ್ ನಿಲ್ದಾಣದ ಬಳಿ ಬರುವಂತೆ ತಿಳಿಸಿದ್ದೆನೆಂತಲೂ, ನಂತರ ಸದರಿ ವಿಚಾರವನ್ನು ಚಾಸಾ 4 ಮತ್ತು ಚಾಸಾ 5 ರವರಿಗೆ ತಿಳಿಸಿದೆನೆಂತಲೂ, ಖಾಸಗಿ ಕಾರಿನಲ್ಲಿ ತಾವು ಬಸ್ ನಿಲ್ದಾಣದಿಂದ ಮಾಹಿತಿ ಇದ್ದ ಸ್ಥಳಕ್ಕೆ ಹೋಗಿರುತ್ತೇವೆಂತಲೂ, ನಂತರ ರಿಸೆಪ್ಶನ್ ಗೆ ಹೋಗಿ ರೂಂಾಮ್ ನಂಬರ್ 1 ರಲ್ಲಿ ತಾನು ಹಾಗೂಾ ಸಿಬ್ಬಂದಿಗಳು ಹೋದಾಗ ಅಂದರ್ ಬಾಹರ್ ಎಂಬ ಶಬ್ದ ಕೇಳಿ ಬರುತ್ತಿತ್ತೆಂತಲೂ, ಸದರಿ ರೂಮಿನ ಒಳಗೆ ಪ್ರವೇಶ ಮಾಡಿದಾಗ ರೂಮ್ ನಂಬರ್ 1 ಆಗಿರುತ್ತದೆಂತಲೂ, ಆಗ ಸಮಯ 9-00 ಗಂಟೆಯಾಗಿತ್ತೆಂತಲೂ, ಒಳಗಿದ್ದವರ ಕೈಯಲ್ಲಿ ಇಸ್ಪೀಟ್ ಎಲೆಗಳು ಇದ್ದು, ಒಟ್ಟು 3 ಟೇಬಲ್‌ಗಳು ಇದ್ದವೆಂತಲೂ, ಸದರಿ ಸ್ಥಳದಲ್ಲಿ ಸುಮಾರು 34 ಪ್ಲಾಸ್ಟಿಕ್ ಚೇರುಗಳು ಇರುವುದು ಕಂಡುಬಂದಿತೆಂತಲೂ, ನಂತರ ಇಸ್ಪೀಟ್ ಎಲೆಗಳನ್ನು ಹಿಡಿದುಕೊಂಡಿದ್ದ ವ್ಯಕ್ತಿಯ ಹೆಸರು ವಿಳಾಸ ಕೇಳಿದಾಗ ಆತನ ಹೆಸರು ರಾಜು, ಬಿನ್ ಲೇಟ್ ತಮ್ಮಯ್ಯ ಎಂದು ತಿಳಿಸಿದರೆಂತಲೂ, ಪರವಾನಿಗೆ ಬಗ್ಗೆ ವಿಚಾರಿಸಲಾಗಿ ಜೂಜಾಡಲು ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿದರೆಂತಲೂ, ಸದರಿ ಸ್ಥಳದಲ್ಲಿ ಒಟ್ಟು 34 ಜನರು ಇದ್ದು ಉಳಿದವರ ಹೆಸರು ತನಗೆ ನೆನಪಿರುವುದಿಲ್ಲವೆಂತಲೂ, ನಂತರ ಚಾಸಾ 2 ಮತ್ತು ಚಾಸಾ.3 ರವರು ಎಂಬುವವರನ್ನು ಮಹಜರ್ ಸಾಕ್ಷಿಗಳನ್ನು ತಾನೇ ಬರಮಾಡಿಕೊಂಡಿದ್ದೆವೆಂತಲೂ,

ಅವರ ಸಮಕ್ಷಮ 9-30 ರಿಂದ 11-30 ಗಂಟೆವರೆಗೆ ಪಂಚನಾಮೆಯನ್ನು ಜರುಗಿಸಿದ್ದೇವೆಂತಲೂ, ಸದರಿ ಸ್ಥಳದಲ್ಲಿ ಐದು ಲಕ್ಷದ ಐವತ್ತು ನಾಲ್ಕು ರೂಪಾಯಿಗಳನ್ನು ವಶಕ್ಕೆ ಪಡೆದೆವೆಂತಲೂ, ಒಟ್ಟು 52 ಇಸ್ಪೀಟ್ ಎಲೆಗಳು, 3 ಟೇಬಲ್‌ಗಳು, 34 ಪ್ಲಾಸ್ಟಿಕ್ ಚೇರುಗಳು, ಪ್ಲಾಸ್ಟಿಕ್ ಬಾಕ್ಸುಗಳು ಇದ್ದು ಅವುಗಳನ್ನು ಹಾಗೂಾ ಎಲ್ಲಾ ಆರೋಪಿಗಳ ಮೊಬೈಲ್ ಗಳನ್ನು ವಶಕ್ಕೆ ಪಡೆಯಲಾಯಿತೆಂತಲೂ, ಆರೋಪಿಗಳನ್ನು ರಾತ್ರಿ 12-15 ಗಂಟೆ ಸಮಯದಲ್ಲಿ ಠಾಣೆಗೆ ಕರೆದುಕೊಂಡು ಹೋಗಿರುತ್ತೇವೆಂತಲೂ, ಠಾಣಾ ಎಸ್.ಹೆಚ್ ಒ., ರವರಿಗೆ ವರದಿ ಮಾಲು ಹಾಗೂಾ ಆರೋಪಿತರನ್ನು ವಶಕ್ಕೆ ನೀಡಿರುತ್ತೇನೆಂತಲೂ, ಸದರಿ ಮಹಜರ್ ಕಾಲದಲ್ಲಿ ಸ್ಥಳದಲ್ಲಿ ಪೋಟೋಗಳನ್ನು ತೆಗೆದಿರುತ್ತೇವೆಂದು ನುಡಿದಿರುತ್ತಾರೆ.

9. ಸದರಿ ಸಾಕ್ಷಿಯು ಸ್ಥಳ ಮಹಜರನ್ನು ನಿಪಿ.1 ಎಂದು, ತನ್ನ ಸಹಿಯನ್ನು ನಿಪಿ.1(ಎ) ಎಂದು, ಪಂಚರಿಗೆ ನೀಡಿದ ನೋಟಿಸನ್ನು ನಿಪಿ.2 ಹಾಗೂ ತನ್ನ ಸಹಿಯನ್ನು ನಿಪಿ.2(ಎ) ಎಂದು, ಎರಡು ಪೋಟೋಗಳನ್ನು ನಿಪಿ.3 ಹಾಗೂ ನಿಪಿ.4 ಎಂದೂಾ ಹಾಗೂ ಒಂದು ಸಿ.ಡಿ.ಅನ್ನು ನಿಪಿ.5 ಎಂದು, ವರದಿಯನ್ನು ನಿಪಿ.6 ಎಂದು, ತನ್ನ ಸಹಿಯನ್ನು ನಿಪಿ.6(ಎ) ಎಂದು, ನ್ಯಾಯಾಲಯದ ಮುಂದಿರುವ ರೂ.10/- ಮುಖ ಬೆಲೆಯ ಒಟ್ಟು 32 ನೋಟುಗಳು, ರೂ.20/- ಮುಖಬೆಲೆಯ ಒಟ್ಟು 21 ನೋಟುಗಳು, ರೂ.50/- ಮುಖಬೆಲೆಯ ಒಟ್ಟು 12 ನೋಟುಗಳು, ರೂ.100/- ಮುಖಬೆಲೆಯ ಒಟ್ಟು 66 ನೋಟುಗಳು, ರೂ.200/- ರ ಮುಖ ಬೆಲೆಯ 16 ಒಟ್ಟು ನೋಟುಗಳು ಹಾಗೂ ರೂ.500/- ರ ಮುಖ ಬೆಲೆಯ ಒಟ್ಟು 1086 ನೋಟುಗಳನ್ನು ನೋಡಿ ತನಗೆ ನೆನಪಿರುವುದಿಲ್ಲವೆಂತಲೂ, ಸದರಿ ಹಣವನ್ನು ಮುದ್ದೆ ಮಾಲು 1

Visit **ecourts.gov.in** for updates or download mobile app "**eCourts Services**" from Android or iOS

ಎಂದು, ಒಟ್ಟು 52 ಇಸ್ಪೀಟ್ ಎಲೆಗಳನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆ ಮಾಲು 2 ಎಂದು, ಒಟ್ಟು 8 ಮೊಬೈಲ್ ಗಳನ್ನು ನೋಡಿ ಗುರುತಿಸಿ ಅವುಗಳನ್ನು ಒಟ್ಟಾಗಿ ಮುದ್ದೆ ಮಾಲು 3 ಎಂದು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ. 3 ಟೇಬಲ್ ಹಾಗೂ 34 ಪ್ಲಾಸ್ಟಿಕ್ ಚೇರುಗಳು, 4 ಕಾರುಗಳು ಹಾಗೂ ಒಂದು ಪ್ಲಾಸ್ಟಿಕ್ ಬಾಕ್ಸನ್ನು, 3 ಬೆಡ್ ಶೀಟುಗಳನ್ನು ಕೃತ್ಯದ ಕಾಲದಲ್ಲಿ ವಶಕ್ಕೆ ಪಡೆದಿರುತ್ತೇವೆಂದು ನುಡಿದಿರುತ್ತಾರೆ. ಸದರಿ ಸಾಕ್ಷಿಯು ನ್ಯಾಯಾಲಯದ ಮುಂದಿರುವ ಈ ದಿನ ಹಾಜರಾಗಿರುವ 7, 9, 10, 11, 19, 24, 29, 32, 35 ನೇ ಆರೋಪಿಗಳನ್ನು ಸದರಿ ವಿ.ಸಿ. ಮೂಲಕ ನೋಡಿ ಗುರುತಿಸಲು ಸಾಧ್ಯವಿಲ್ಲ ಎಂದು ನುಡಿದಿರುತ್ತಾರೆ.

10. ಚಾಸಾ.1/ಪ್ರಾಸಾ.1 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದುದ, ಪಾಟೀ ಸವಾಲಿನಲ್ಲಿಃ

*"ಬಂದಿತ್ತು ಎನ್ನಲಾದ ಮಾಹಿತಿಯ ಬಗ್ಗೆ ಹಾಗೂ ಸದರಿ ಘಟನೆಯ ಬಗ್ಗೆ ನಾನು ತಕ್ಷಣವೇ ಜಯಪುರ ಪಿ.ಎಸ್.ಐ., ಯವರಿಗೆ ವಿಚಾರ ತಿಳಿಸಿರುವುದಿಲ್ಲ. ಸದರಿ ಸ್ಥಳ ಜಯಪುರ ಠಾಣೆಯಿಂದ ಒಂದು ಕಿ.ಮಿ. ಅಂತರದಲ್ಲಿರುತ್ತದೆ. ಕೃತ್ಯ ನಡೆಯಿತು ಎನ್ನಲಾದ ಸ್ಥಳವು ಜಯಪುರ ಠಾಣೆಯಿಂದ ಸುಮಾರು 22 ಕಿಮೀ ಅಂತರ ಇರುತ್ತದೆ.*

*ಚಾಸಾ.2 ಮತ್ತು ಚಾಸಾ.3 ರವರನ್ನು ಅವರ ಮನೆಯಿಂದ ಕರೆದುಕೊಂಡು ಹೋಗಿದ್ದೆವು. ಜಯಪುರ ಒಂದು ಹೋಬಳಿಯಾಗಿದ್ದು ಅಲ್ಲಿ ತುಂಬಾ ಮನೆಗಳು, ಅಂಗಡಿಗಳು ಇರುತ್ತವೆ ಎಂದರೆ ಸರಿ. ಚಾಸಾ.2 ಮತ್ತು ಚಾಸಾ.3 ರವರನ್ನು ಯಾರು ಕರೆದುಕೊಂಡು ಬಂದಿರುತ್ತಾರೆ ಎಂದರೆ ಜಯಪುರ ಠಾಣೆಯ ಸಿಬ್ಬಂದಿಗಳು ಕರೆದುಕೊಂಡು ಬಂದಿರುತ್ತಾರೆ.*

*ಚಾಸಾ.2 ಮತ್ತು ಚಾಸಾ.3 ರವರ ತಂದೆಯ ಹೆಸರು ನನಗೆ ಗೊತ್ತಿಲ್ಲ, ಸದರಿಯವರು ಜಯಪುರದ ವಾಸಿಗಳಾಗಿರುತ್ತಾರೆ.*

*ನಾವು ಕೃತ್ಯ ನಡೆಯಿತು ಎನ್ನಲಾದ ಸ್ಥಳಕ್ಕೆ ಹೋದೆವು ಎಂದಾಗ ಸದರಿ ಸ್ಥಳದಲ್ಲಿ ಆರೋಪಿಗಳನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಮೊದಲ ಬಾರಿಗೆ ಕೊಠಡಿಯ ಒಳಗೆ ಯಾರು ಹೊಗಿದ್ದರು ಎಂದರೆ ಸಿಬ್ಬಂದಿಗಳು ಹೋಗಿದ್ದರು ಎನ್ನುತ್ತಾರೆ.*

*ಕೃತ್ಯ ನಡೆಯಿತು ಎನ್ನಲಾದ ಸ್ಥಳದಲ್ಲಿ ಇದ್ದರು ಎನ್ನಲಾದ 34 ಜನ ಆರೋಪಿತರ ಹೆಸರು, ವಿಳಾಸ ಹಾಗೂ ಅವರ ಚಹರೆಯನ್ನು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ.*

*ನಿಪಿ.1 ರ ಮಹಜರನ್ನು ಚಾಸಾ 10 ರವರು ಬರೆದಿರುತ್ತಾರೆ. ಕೃತ್ಯ ನಡೆಯಿತು ಎನ್ನಲಾದ ಸ್ಥಳದ ಅಕ್ಕ ಪಕ್ಕದಲ್ಲಿ ವಾಸದ ಮನೆಗಳು ಇರುವುದು ಕಂಡು ಬಂದಿರುವುದಿಲ್ಲ. ವಾಸದ ಮನೆಗಳು ಎಷ್ಟು ದೂರದಲ್ಲಿ ಇದ್ದವು ಎಂದು ಹೇಳಲಾಗುವುದಿಲ್ಲ ಎಂದರೆ ಸರಿ.*

*ನಿಪಿ.1 ರಲ್ಲಿ ನಮೂದು ಮಾಡಿರುವ 34 ವ್ಯಕ್ತಿಗಳ ಹೆಸರು, ವಿಳಾಸ ಹಾಗೂ ಚಹರೆಗಳನ್ನು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ.*

*ನ್ಯಾಯಾಲಯದ ಮುಂದಿರುವ ಆರೋಪಿತರು ಕೃತ್ಯದ ಕಾಲದಲ್ಲಿ ಭಾಗಿಯಾಗಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ.*

*ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು 1 ರ ಹಣವನ್ನು ಕೃತ್ಯ ನಡೆಯಿತು ಎನ್ನಲಾದ ದಿನವೇ ವಶಕ್ಕೆ ಪಡೆದ ಬಗ್ಗೆ ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ. ಮುದ್ದೆ*

*ಮಾಲು 1 ರ ಮೇಲೆ ನನ್ನ ಸಹಿಯಿರುವ ಚೀಟಿಯನ್ನು ಅಂಟಿಸಿರುತ್ತೇನೆ. ಮುದ್ದೆ ಮಾಲು 1 ರ ಮೇಲೆ ಈ ದಿನ ನನ್ನ ಸಹಿ ಮಾಡಿರುವ ಚೀಟಿ ಇರುವುದಿಲ್ಲ ಎಂದರೆ ನನಗೆ ಆ ಬಗ್ಗೆ ಗೊತ್ತಿರುವುದಿಲ್ಲ. ನಾನು ಸಹಿ ಮಾಡಿ ಅಂಟಿಸಿದ ಚೀಟಿ ಮುದ್ದೆ ಮಾಲು 1 ರ ಮೇಲೆ ಇಲ್ಲದೆ ಇರುವುದರಿಂದ ಸದರಿ ಹಣವನ್ನು ಕೃತ್ಯ ನಡೆಯಿತು ಎನ್ನಲಾದ ದಿನ ವಶಕ್ಕೆ ಪಡೆದವು ಎಂದು ಹೇಳಲಾಗುವುದಿಲ್ಲ ಎಂದರೆ ಸರಿ.*

*ಮುದ್ದೆ ಮಾಲು 3 ರಲ್ಲಿರುವ 8 ಮೊಬೈಲ್ ಗಳು ಕೃತ್ಯಕ್ಕಾಗಿ ವಶಕ್ಕೆ ಪಡೆದ ಬಗ್ಗೆ ಹೇಳಲಾಗುವುದಿಲ್ಲ ಎಂದರೆ ಸರಿ.*

*ಕೃತ್ಯಕ್ಕೆ ಸಂಬಂಧಿಸಿದ 3 ಟೇಬಲ್ ಗಳಲ್ಲಿ ಆರೋಪಿತರು ಜೂಜಾಟ ಆಡುತ್ತಿದ್ದರು. ಕೃತ್ಯ ನಡೆಯಿತು ಎನ್ನಲಾದ ಸ್ಥಳದಲ್ಲಿ 52 ಇಸ್ಪೀಟ್ ಎಲೆಗಳು ಮಾತ್ರ ನಮಗೆ ಸಿಕ್ಕಿರುತ್ತವೆ. ಜೂಜಾಟ ಆಡಬೇಕಾದರೆ 52 ಇಸ್ಪೀಟ್ ಎಲೆಗಳನ್ನು ಬಳಸಿಕೊಂಡು ಅಡಬೇಕಾಗುತ್ತದೆ ಎಂದರೆ ಸರಿ. ಸದರಿ 3 ಟೇಬಲ್ ಗಳಲ್ಲಿ ಯಾವುದೇ ಇಸ್ಪೀಟ್ ಆಡಬೇಕಾದರೆ 52 ಎಲೆಗಳನ್ನು ಬಳಸಿಕೊಂಡು ಆಡಲು ಬರುವುದಿಲ್ಲ ಎಂದರೆ ಸರಿ. ಮುದ್ದೆ ಮಾಲು 2 ಸಾಮಾನ್ಯವಾಗಿ ಎಲ್ಲಾ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ.*

*ಮುದ್ದೆ ಮಾಲು 2ರ ಮೇಲೆ ನನ್ನ ಸಹಿ ಇರುವ ಚೀಟಿ ಇರುವುದಿಲ್ಲ ಎಂದರೆ ನನಗೆ ಆ ಬಗ್ಗೆ ಗೊತ್ತಿರುವುದಿಲ್ಲ. ಆದ್ದರಿಂದ ಮುದ್ದೆ ಮಾಲು 2 ಕೃತ್ಯಕ್ಕೆ ಸಂಬಂಧಪಟ್ಟಂತೆ ವಶಕ್ಕೆ ಪಡೆಯಲಾಯಿತು ಹೇಳಲಾಗುವುದಿಲ್ಲ ಎಂದರೆ ಸರಿ.*

Visit **ecourts.gov.in** for updates or download mobile app "**eCourts Services**" from Android or iOS

*11.* ಈ ಮೇಲ್ಕಂಡ ಪಾಟೀ ಸವಾಲಿನ ಅಂಶವನ್ನು ಪರಿಶೀಲಿಸಲಾಗಿ ಸಾಕ್ಷಿಯು ತನಗೆ *ಬಂದಿತ್ತು ಎಂದು ಹೇಳಲಾದ ಮಾಹಿತಿಯ ಬಗ್ಗೆ ಹಾಗೂ ಸದರಿ ಘಟನೆಯ ಬಗ್ಗೆ ತಕ್ಷಣವೇ ಜಯಪುರ ಪಿ.ಎಸ್.ಐ.ರವರಿಗೆ ವಿಚಾರ ತಿಳಿಸಿರುವುದಿಲ್ಲವೆಂದು ನುಡಿದಿರುತ್ತಾರೆ. ಹಾಗೂ ಚಾಸಾ.2 ಮತ್ತು ಚಾಸಾ.3 ರವರನ್ನು ಅವರ ಮನೆಯಿಂದ ಕರೆದುಕೊಂಡು ಹೋಗಿದ್ದೆವೆಂಬುದಾಗಿ, ಜಯಪುರ ಒಂದು ಹೋಬಳಿಯಾಗಿದ್ದು ಅಲ್ಲಿ ತುಂಬಾ ಮನೆಗಳು, ಅಂಗಡಿಗಳು ಇರುತ್ತವೆಂಬುದಾಗಿ ಸ್ಪಷ್ಟವಾಗಿ ನುಡಿದಿರುತ್ತಾರೆ. ಅಲ್ಲದೇ ಚಾಸಾ.2 ಮತ್ತು ಚಾಸಾ.3 ರವರನ್ನು ಜಯಪುರ ಠಾಣೆಯ ಸಿಬ್ಬಂದಿಗಳು ಕರೆದುಕೊಂಡು ಬಂದಿರುತ್ತಾರೆಂಬುದಾಗಿ ನುಡಿದಿರುತ್ತಾರೆ. ಚಾಸಾ.2 ಮತ್ತು ಚಾಸಾ.3 ರವರ ತಂದೆಯ ಹೆಸರು ತನಗೆ ಗೊತ್ತಿಲ್ಲವೆಂಬುದಾಗಿ, ಸದರಿಯವರು ಜಯಪುರದ ವಾಸಿಗಳಾಗಿರುತ್ತಾರೆಂಬುದಾಗಿ ನುಡಿದಿದ್ದು, ಸದರಿಯವರ ಹೆಸರು ಮತ್ತು ವಿಳಾಸ ಗೊತ್ತಿಲ್ಲವೆಂಬುದರ ಅಂಶವನ್ನು ಪರಿಶೀಲಿಸಲಾಗಿ ನಿಪಿ.1 ಸ್ಥಳ ಮಹಜರಿನ ಬಗ್ಗೆ ಸಂಶಯವ್ಯಕ್ತವಾಗುತ್ತದೆ. ಅಲ್ಲದೇ ಕೃತ್ಯ ನಡೆಯಿತು ಎನ್ನಲಾದ ಸ್ಥಳಕ್ಕೆ ತಾವು ಹೋದಾಗ ಸದರಿ ಸ್ಥಳದಲ್ಲಿ ಆರೋಪಿಗಳನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲವೆಂಬುದಾಗಿ ಸ್ಪಷ್ಟವಾಗಿ ನುಡಿದಿರುತ್ತಾರೆ. ಬಹುಮುಖ್ಯವಾಗಿ ಕೃತ್ಯ ನಡೆಯಿತು ಎನ್ನಲಾದ ಸ್ಥಳದಲ್ಲಿ ಇದ್ದರು ಎನ್ನಲಾದ 34 ಜನ ಆರೋಪಿತರ ಹೆಸರು, ವಿಳಾಸ ಹಾಗೂ ಅವರ ಚಹರೆಯನ್ನು ಹೇಳಲಾಗುವುದಿಲ್ಲವೆಂಬುದಾಗಿ ಸ್ಪಷ್ಟವಾಗಿ ಒಪ್ಪಿರುತ್ತಾರೆ. ಹೀಗಿರುವಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿತರೇ ಕೃತ್ಯದಲ್ಲಿ ಬಾಗಿಯಾದ ಆರೋಪಿತರು ಆಗಿರುತ್ತಾರೆಯೇ ಎಂಬ ಬಗ್ಗೆ ಸಂಶಯ ವ್ಯಕ್ತವಾಗುತ್ತದೆ. ಕಾರಣವೇನೆಂದರೆ ಸದರಿ ಸಾಕ್ಷಿಯು ಆರೋಪಿತರ ಹೆಸರು ಮತ್ತು ವಿಳಾಸ ಹಾಗೂ ಚಹರೆ ಬಗ್ಗೆ ತನಗೆ*

ಹೇಳಲಾಗುವುದಿಲ್ಲವೆಂಬುದಾಗಿ ಸ್ಪಷ್ಟವಾಗಿ ನುಡಿದ ಅಂಶದಿಂದಲೂ ಸಹ ಕೃತ್ಯದ ಬಗ್ಗೆ ಸಂಶಯ ವ್ಯಕ್ತವಾಗುತ್ತದೆ. ಹಾಗೂ ನಿಪಿ.1 ರ ಮಹಜರನ್ನು ಚಾಸಾ.10 ರವರು ಬರೆದಿರುತ್ತಾರೆಂಬುದಾಗಿ, ಕೃತ್ಯ ನಡೆಯಿತು ಎನ್ನಲಾದ ಸ್ಥಳದ ಅಕ್ಕ ಪಕ್ಕದಲ್ಲಿ ವಾಸದ ಮನೆಗಳು ಇರುವುದು ಕಂಡು ಬಂದಿರುವುದಿಲ್ಲವೆಂಬುದಾಗಿಯೂ, ವಾಸದ ಮನೆಗಳು ಎಷ್ಟು ದೂರದಲ್ಲಿ ಇದ್ದವು ಎಂದು ಹೇಳಲಾಗುವುದಿಲ್ಲವೆಂಬುದಾಗಿ ನುಡಿದ ಅಂಶದಿಂದ ಸದರಿ ಸಾಕ್ಷಿಯ ಹೇಳಿಕೆ ಸ್ಪಷ್ಟತೆ ಇಲ್ಲದೇ ಇರುವುದು ಕಂಡು ಬರುತ್ತದೆ. ಅಲ್ಲದೇ ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು 1 ರ ಹಣವನ್ನು ಕೃತ್ಯ ನಡೆಯಿತು ಎನ್ನಲಾದ ದಿನವೇ ವಶಕ್ಕೆ ಪಡೆದ ಬಗ್ಗೆ ಹೇಳಲಾಗುವುದಿಲ್ಲ ಎಂಬುದಾಗಿ ಒಪ್ಪಿರುತ್ತಾರೆ. ಮುದ್ದೆ ಮಾಲು-1 ರ ಮೇಲೆ ತನ್ನ ಸಹಿಯಿರುವ ಚೀಟಿಯನ್ನು ಅಂಟಿಸಿರುತ್ತೇನೆಂಬುದಾಗಿ, ಮುದ್ದೆ ಮಾಲು 1 ರ ಮೇಲೆ ಈ ದಿನ ತನ್ನ ಸಹಿ ಮಾಡಿರುವ ಚೀಟಿ ಇರುವುದಿಲ್ಲ ಎಂದರೆ ತನಗೆ ಆ ಬಗ್ಗೆ ಗೊತ್ತಿರುವುದಿಲ್ಲವೆಂಬುದಾಗಿ, ತಾನು ಸಹಿ ಮಾಡಿ ಅಂಟಿಸಿದ ಚೀಟಿ ಮುದ್ದೆ ಮಾಲು-1 ರ ಮೇಲೆ ಇಲ್ಲದೆ ಇರುವುದರಿಂದ ಸದರಿ ಹಣವನ್ನು ಕೃತ್ಯ ನಡೆಯಿತು ಎನ್ನಲಾದ ದಿನ ವಶಕ್ಕೆ ಪಡೆದವು ಎಂದು ಹೇಳಲಾಗುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಅಲ್ಲದೆ ಮುದ್ದೆ ಮಾಲು 3 ರಲ್ಲಿರುವ 8 ಮೊಬೈಲ್ ಗಳು ಕೃತ್ಯಕ್ಕಾಗಿ ವಶಕ್ಕೆ ಪಡೆದ ಬಗ್ಗೆ ಹೇಳಲಾಗುವುದಿಲ್ಲವೆಂಬುದಾಗಿ ನುಡಿದಿರುತ್ತಾರೆ. ಕೃತ್ಯಕ್ಕೆ ಸಂಬಂಧಿಸಿದ 3 ಟೇಬಲ್ ಗಳಲ್ಲಿ ಆರೋಪಿತರು ಜೂಜಾಟ ಆಡುತ್ತಿದ್ದವೆಂಬುದಾಗಿ, ಕೃತ್ಯ ನಡೆಯಿತು ಎನ್ನಲಾದ ಸ್ಥಳದಲ್ಲಿ 52 ಇಸ್ಪೀಟ್ ಎಲೆಗಳು ಮಾತ್ರ ತಮಗೆ ಸಿಕ್ಕಿರುತ್ತವೆಂಬುದಾಗಿಯೂ, ಜೂಜಾಟ ಆಡಬೇಕಾದರೆ 52 ಇಸ್ಪೀಟ್ ಎಲೆಗಳನ್ನು ಬಳಸಿಕೊಂಡು ಅಡಬೇಕಾಗುತ್ತದೆಂಬುದನ್ನು ಒಪ್ಪಿರುತ್ತಾರೆ. ಅಲ್ಲದೇ ಸದರಿ 3

*ಟೇಬಲ್ ಗಳಲ್ಲಿ ಯಾವುದೇ ಇಸ್ಪೀಟ್ ಆಡಬೇಕಾದರೆ 52 ಎಲೆಗಳನ್ನು ಬಳಸಿಕೊಂಡು ಆಡಲು ಬರುವುದಿಲ್ಲವೆಂಬುದಾಗಿ, ಮುದ್ದೆಮಾಲು-2 ಸಾಮಾನ್ಯವಾಗಿ ಎಲ್ಲಾ ಅಂಗಡಿಗಳಲ್ಲಿ ಸಿಗುತ್ತವೆಂಬುದಾಗಿ ನುಡಿದಿರುತ್ತಾರೆ. ಮುದ್ದೆ ಮಾಲು 2 ರ ಮೇಲೆ ತನ್ನ ಸಹಿ ಇರುವ ಚೀಟಿ ಇರುವುದಿಲ್ಲ ಎಂದರೆ ತನಗೆ ಆ ಬಗ್ಗೆ ಗೊತ್ತಿರುವುದಿಲ್ಲವೆಂಬುದಾಗಿ, ಆದ್ದರಿಂದ ಮುದ್ದೆ ಮಾಲು 2 ಕೃತ್ಯಕ್ಕೆ ಸಂಬಂಧಪಟ್ಟಂತೆ ವಶಕ್ಕೆ ಪಡೆಯಲಾಯಿತು ಎಂಬುದಾಗಿ ಬಗ್ಗೆ ಹೇಳಲಾಗುವುದಿಲ್ಲ ಎಂಬುದಾಗಿ ಒಪ್ಪಿರುತ್ತಾರೆ. ಸದರಿ ಮೇಲ್ಕಂಡ ಅಂಶಗಳನ್ನು ಪರಿಶೀಲಿಸಲಾಗಿ ಸದರಿ ಸಾಕ್ಷಿಯ ಹೇಳಿಕೆಯಿಂದ ಮುದ್ದೆ ಮಾಲುಗಳ ಬಗ್ಗೆಯೇ ಸಂಶಯ ವ್ಯಕ್ತವಾಗುತ್ತದೆ.*

*12.* ***ಮುಂದುವರೆದ ಪಾಟೀ ಸವಾಲಿನಲ್ಲಿ:***

***"ನಿಪಿ.3 ಹಾಗೂ ನಿಪಿ.4 ರ ಫೋಟೋಗಳನ್ನು ಯಾರು ತೆಗೆದಿರುತ್ತಾರೆ ಎಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿ. ನಿಪಿ.3 ಹಾಗೂ 4 ಅನ್ನು ಮೊಬೈಲ್ ಮಾಲಕ ತೆಗೆಯಲಾಗಿರುತ್ತದೆ. ಸದರಿ ಫೋಟೋಗಳನ್ನು ಎಲ್ಲಿ ಪ್ರಿಂಟ್ ತೆಗೆಯಲಾಯಿತು ಎಂದು ನನಗೆ ಮಾಹಿತಿ ಇರುವುದಿಲ್ಲ, ತನಿಖಾಧಿಕಾರಿಗಳಿಗೆ ಮಾಹಿತಿ ಇರುತ್ತದೆ. ನಿಪಿ.3 ಹಾಗೂ 4 ರಲ್ಲಿರುವ ವ್ಯಕ್ತಿಗಳ ಹೆಸರು ವಿಳಾಸ ನನಗೆ ನೆನಪಿರುವುದಿಲ್ಲ.***

***ಯಾವ ಯಾವ ಕಂಪನಿಯ ಮೊಬೈಲ್ ಗಳನ್ನು ವಶಕ್ಕೆ ಪಡೆದಿರುತ್ತೇವೆ ಎಂದರೆ ಪೊರ್ಟಕೊ ಕಂಪನಿಯದ್ದಾಗಿರುತ್ತವೆ. ಯಾವ ಮುಖ ಬೆಲೆಯ ಎಷ್ಟು ನೋಟುಗಳನ್ನು ವಶಕ್ಕೆ ಪಡೆದೆವು ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ.***

Visit **ecourts.gov.in** for updates or download mobile app "**eCourts Services**" from Android or iOS

*ನಿಪಿ.3 ಹಾಗೂ 4 ರ ಪೋಟೋಗಳ ಬಗ್ಗೆ ನಿಪಿ.6 ರ ವರದಿಯಲ್ಲಿ ತಿಳಿಸಿರುವುದಿಲ್ಲ. "*

*13. ಈ ಮೇಲ್ಕಂಡ ಪಾಟೀ ಸವಾಲಿನ ಅಂಶವನ್ನು ಪರಿಶೀಲಿಸಲಾಗಿ ಸದರಿ ಸಾಕ್ಷಿಯು ನಿಪಿ.3 ಹಾಗೂ ನಿಪಿ.4 ರ ಪೋಟೋಗಳನ್ನು ಯಾರು ತೆಗೆದಿರುತ್ತಾರೆ ಎಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲವೆಂಬುದಾಗಿ ಸ್ಪಷ್ಟವಾಗಿ ನುಡಿದಿರುತ್ತಾರೆ. ಅಲ್ಲದೇ ನಿಪಿ.3 ಹಾಗೂ ನಿಪಿ.4 ಅನ್ನು ಮೊಬೈಲ್ ಮೂಲಕ ತೆಗೆಯಲಾಗಿರುತ್ತದೆಂಬುದಾಗಿ ಹಾಗೂ ಸದರಿ ಪೋಟೋಗಳನ್ನು ಎಲ್ಲಿ ಪ್ರಿಂಟ್ ತೆಗೆಯಲಾಯಿತು ಎಂದು ತನಗೆ ಮಾಹಿತಿ ಇರುವುದಿಲ್ಲ, ತನಿಖಾಧಿಕಾರಿಗಳಿಗೆ ಮಾಹಿತಿ ಇರುತ್ತದೆಂಬುದಾಗಿ ನುಡಿದಿರುತ್ತಾರೆ. ಅಲ್ಲದೇ ನಿಪಿ.3 ಹಾಗೂ ನಿಪಿ.4 ರಲ್ಲಿರುವ ವ್ಯಕ್ತಿಗಳ ಹೆಸರು ವಿಳಾಸ ತನಗೆ ನೆನಪಿರುವುದಿಲ್ಲವೆಂಬುದಾಗಿ ನುಡಿರುತ್ತಾರೆ. ಅಲ್ಲದೇ ಯಾವ ಯಾವ ಕಂಪನಿಯ ಮೊಬೈಲ್ ಗಳನ್ನು ವಶಕ್ಕೆ ಪಡೆದಿರುತ್ತೇವೆ ಎಂದರೆ ಪೊರ್ಟಕೊ ಕಂಪನಿಯದ್ದಾಗಿರುತ್ತವೆಂಬುದಾಗಿ, ಯಾವ ಮುಖ ಬೆಲೆಯ ಎಷ್ಟು ನೋಟುಗಳನ್ನು ವಶಕ್ಕೆ ಪಡೆಯಲಾಯಿತು ಎಂಬುದರ ಬಗ್ಗೆ ತನಗೆ ನಿಖರವಾಗಿ ಹೇಳಲಾಗುವುದಿಲ್ಲವೆಂಬುದಾಗಿ, ನಿಪಿ.3 ಹಾಗೂ ನಿಪಿ.4 ರ ಪೋಟೋಗಳ ಬಗ್ಗೆ ನಿಪಿ.6 ರ ವರದಿಯಲ್ಲಿ ತಿಳಿಸಿರುವುದಿಲ್ಲವೆಂಬುದಾಗಿ ಸ್ಪಷ್ಟವಾಗಿ ನುಡಿದಿರುವ ಅಂಶವನ್ನು ಪರಿಶೀಲಿಸಲಾಗಿ ಸದರಿ ಅಂಶದಿಂದ ನಿಪಿ.3 ಮತ್ತು ನಿಪಿ.4, ಪೋಟೋಗಳ ಬಗ್ಗೆ ಸಂಶಯವ್ಯಕ್ತವಾಗುತ್ತದೆ.*

14. ಅಭಿಯೋಜನೆಯು ಆರೋಪಿತರ ಮೇಲಿನ ಆರೋಪವನ್ನು ಸಾಬೀತುಪಡಿಸುವ ಸಲುವಾಗಿ ಚಾಸಾ-2/ಪ್ರಾಸಾ-2 ಹೆಚ್ ಎಂ. ಸತೀಶ್ ಹಾಗೂ

ಚಾಸಾ-3/ಪ್ರಾಸಾ.3 ಫಣಿರಾಜ ಇವರು ಸ್ಥಳ ಮಹಜರ್ ಸಾಕ್ಷಿದಾರರಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ನಿಪಿಃ 1 ದಾಖಲೆಯಲ್ಲಿರುವ ತಮ್ಮ ಸಹಿಗಳನ್ನು ಕ್ರಮವಾಗಿ ನಿಪಿಃ 1 (ಬಿ) ಮತ್ತು 1(ಸಿ) ಎಂದು ಗುರುತಿಸಿದ್ದು, ನಿಪಿ.1 ಕ್ಕೆ ತಾವು ಜಯಪುರ ಬಸ್ ನಿಲ್ದಾಣದಲ್ಲಿ ಸಹಿ ಮಾಡಿರುತ್ತೇವೆಂತಲೂ, ಸದರಿ ದಾಖಲೆಗೆ ತಾವು ಪೊಲೀಸರ ಕೋರಿಕೆಯ ಮೇರೆಗೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುವುದಾಗಿ, ನಿಪಿ-1 ರಲ್ಲಿ ಏನು ಬರೆದಿದೆ ಎಂದು ತಮಗೆ ಗೊತ್ತಿರುವುದಿಲ್ಲ, ಪೊಲೀಸರು ತಮ್ಮ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಹಾಗೂ ನ್ಯಾಯಾಲಯದ ಮುಂದಿರುವ ಆರೋಪಿತರು ತಮಗೆ ಗೊತ್ತಿಲ್ಲವೆಂದು ಹಾಗೂ ತಾವು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರು ಪಂಚರಿಗೆ ನೀಡಿದ ನೋಟೀಸ್ ಅನ್ನು ನಿಪಿ.2 ಎಂದು, ತಮ್ಮ ಸಹಿಗಳನ್ನು ಕ್ರಮವಾಗಿ ನಿಪಿಃ 2 (ಬಿ) ಮತ್ತು 2(ಸಿ) ಎಂದು ಗುರುತಿಸಿರುತ್ತಾರೆ. ಸದರಿ ಸಾಕ್ಷಿದಾರರು ನಿಪಿ.3 ಮತ್ತು ನಿಪಿ.4 ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಮುದ್ದೆ ಮಾಲು-1 ರಿಂದ ಮುದ್ದೆ ಮಾಲು-3 ಗಳನ್ನು ನೋಡಿ ಗುರುತಿಸುವಲ್ಲಿ ಸದರಿ ಸಾಕ್ಷಿದಾರರು ನಿರಾಕರಿಸಿರುತ್ತಾರೆ. ಸದರಿ ಸಾಕ್ಷಿದಾರರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜನೆಯವರು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಯಾವುದೇ ಉಪಯುಕ್ತವಾದ ಮಾಹಿತಿಯನ್ನು ಸದರಿ ಸಾಕ್ಷಿದಾರರು ಹೊರತಂದಿರುವುದಿಲ್ಲ. ಸದರಿ ಸಾಕ್ಷಿದಾರರಿಗೆ ಹೇಳಿಕೆಗಳ ಭಾಗವನ್ನು ಸಂಪೂರ್ಣವಾಗಿ ಓದಿ ಹೇಳಲಾಗಿ,

Visit **ecourts.gov.in** for updates or download mobile app "**eCourts Services**" from Android or iOS

ಹೇಳಿಕೆಗಳ ಭಾಗವನ್ನು ಅಲ್ಲಗಳೆದಿದ್ದು, ಸದರಿ ಹೇಳಿಕೆಗಳ ಭಾಗವನ್ನು ಕ್ರಮವಾಗಿ ನಿಪಿ.7 ಮತ್ತು ನಿಪಿ.8 ಎಂದು ಗುರುತಿಸಲಾಯಿತು.

15. ಅಭಿಯೋಜನೆಯು ಆರೋಪಿತರ ಮೇಲಿನ ಆರೋಪವನ್ನು ಸಾಬೀತುಪಡಿಸುವ ಸಲುವಾಗಿ ಚಾಸಾ-6/ಪ್ರಾಸಾ-4 ಮೂರ್ತಪ್ಪ, ಇವರು ಚಾಸಾ.1 ರವರಿಗೆ ದಾಳಿಗೆ ಸಹಕರಿಸಿದ ಬಗ್ಗೆ ನುಡಿದ ಸಾಕ್ಷಿದಾರರಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆ ತಾನು ದಿನಾಂಕಃ23/09/2022 ರಂದು ರಾತ್ರಿ 8-00 ಗಂಟೆ ಸಮಯದಲ್ಲಿ ಶೃಂಗೇರಿ ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಠಾಣಾಧಿಕಾರಿಯಾದ ಚಾಸಾ.4 ರವರು ಎ ಎಸ್ ಪಿ ಯವರ ಆದೇಶದ ಮೇರೆಗೆ ಜಯಪುರ ಪೋಲಿಸ್ ಠಾಣೆಗೆ ಹೋಗೋಣ ಎಂದಿದ್ದು, ಅದರಂತೆ ತಾನು ಹಾಗೂ ಚಾಸಾ 4, ಚಾಸಾ 8, ಚಾಸಾ 7 ರವರೊಂದಿಗೆ ಇಲಾಖಾ ಜೀಪಿನಲ್ಲಿ ಜಯಪುರ ಬಸ್ ನಿಲ್ದಾಣಕ್ಕೆ ಹೋದೆವೆಂತಲೂ, ಎ ಎಸ್ ಪಿ., ಹಾಗೂ ಜಯಪುರದ ಎಎಸ್ಐ. ರವರಾದ ಚಾಸಾ.5 ರವರು ಬಸ್ ನಿಲ್ದಾಣದ ಬಳಿ ಬಂದರೆಂತಲೂ, ಎಎಸ್ ಪಿ.,ಯವರು ಪಂಚರಾಗಿ ಚಾಸಾ 2 ಮತ್ತು ಚಾಸಾ.3 ರವರನ್ನು ಬರಮಾಡಿಕೊಂಡು ಜಯಪುರದ ಹೋಮ್ ಸ್ಟೇಯಲ್ಲಿ ಅಕ್ರಮವಾಗಿ ಜೂಜಾಟವಾಡುತ್ತಿರುವುದಾಗಿ ಮಾಹಿತಿ ಬಂದಿದ್ದು, ಅವರೊಂದಿಗೆ ಜಯಪುರದ ಡಿಲೈಟ್ ಹೋಮ್ ಸ್ಟೇ ಬಳಿ ರಾತ್ರಿ 9-10 ಕ್ಕೆ ಹೋದೆವೆಂತಲೂ, ನಂತರ ಸದರಿ ಹೋಮ್ ಸ್ಟೇನ ಮೊದಲ ಕೊಠಡಿಯಲ್ಲಿ ಬೆಂಚುಗಳನ್ನು ಜೋಡಿಸಿ 34 ಜನ ಆಪಾದಿತರು ರೂ.5,54,140/- ಗಳನ್ನು ಪಣವಾಗಿ ಇಟ್ಟುಕೊಂಡು ಅಂದರ್ ಬಾಹರ್ ಆಡುತ್ತಿರುವುದು ಕಂಡುಬಂತೆಂತಲೂ, ನಂತರ ಪಂಚರೊಂದಿಗೆ ಚಾಸಾ.1 ರವರು ದಾಳಿ ನಡೆಸಿದಾಗ 52 ಇಸ್ಪೀಟ್ ಎಲೆಗಳು, 3 ಟೇಬಲ್, 34 ಚೇರುಗಳು , 39 ಮೊಬೈಲ್ ,

Visit **ecourts.gov.in** for updates or download mobile app "**eCourts Services**" from Android or iOS

4 ಕಾರುಗಳು, 3 ಬೆಡ್ ಶೀಟುಗಳು ಇದ್ದು, ಅವುಗಳನ್ನು ಪಂಚರ ಮೂಲಕ ಅಮಾನತು ಪಡಿಸಿಕೊಂಡು, ಪಂಚರ ಸಮಕ್ಷಮ ರಾತ್ರಿ 9-30 ರಿಂದ 11-30 ಗಂಟೆವರೆಗೆ ಮಹಜರನ್ನು ಜಯಪುರ ಠಾಣೆಯ ಚಾಸಾ.10 ರವರು ಬರೆದಿದ್ದು ಅದಕ್ಕೆ ತಾನು ಮಹಜರ್ ಅನ್ನು ಓದಿ ಸಹಿ ಮಾಡಿರುತ್ತೇನೆಂತಲೂ, ನಂತರ ಚಾಸಾ1 ರವರು ಮುಂದಿನ ಕ್ರಮದ ಬಗ್ಗೆ ಜಯಪುರ ಠಾಣೆಗೆ ತೆರಳಿ ವರದಿ, ಮಾಲು ಮತ್ತು 34 ಜನ ಆರೋಪಿತರನ್ನು ಹಾಜರುಪಡಿಸಿದರೆಂತಲೂ, ನಂತರ ಜಯಪುರ ಠಾಣೆಯಲ್ಲಿ ಸದರಿಯವರ ವಿರುದ್ದ ಪ್ರಕರಣ ದಾಖಲಾಯಿತೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿಯು ನಿಪಿ.1 ಮಹಜರಿನಲ್ಲಿ ತನ್ನ ಸಹಿಯನ್ನು ನಿಪಿ. 1(ಡಿ ) ಎಂದು, ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿಯು ನಿಪಿ.3 ಹಾಗು ನಿಪಿ.4 ಅನ್ನು ನೋಡಿ ಗುರುತಿಸಿರುತ್ತಾರೆ ಹಾಗೂ ನ್ಯಾಯಾಲಯದ ಮುಂದಿರುವ ಹಾಜರಿರುವ ಆರೋಪಿತರನ್ನು ಹಾಗೂ ಮುದ್ದೆಮಾಲು.1 ರಿಂದ ಮುದ್ದೆ ಮಾಲು.3 ಗಳನ್ನು ನೋಡಿ ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

16. ಚಾಸಾ.6/ಪ್ರಾಸಾ.4 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ:

> **" ಚಾಸಾ2 ಹಾಗೂ 3 ರವರನ್ನು ಚಾಸಾ 1 ರವರು ಕರೆದುಕೊಂಡು ಬಂದಿರುತ್ತಾರೆ.**
>
> **ಚಾಸಾ2 ಹಾಗೂ 3 ರವರು ಸದರಿ ಸಮಯದಲ್ಲಿ ಬಸ್ ನಿಲ್ದಾಣದ ಎಡಬದಿಯಲ್ಲಿ ನಿಂತಿದ್ದರು. ನಿಮಗೆ ಚಾಸಾ 2 ಹಾಗೂ 3 ರವರ ಹೆಸರು, ವಿಳಾಸದ ಬಗ್ಗೆ ಮಾಹಿತಿ ಇರುತ್ತದೆಯೇ ಎಂದರೆ ನನಗೆ ಗೊತ್ತಿರುವುದಿಲ್ಲ. ಚಾಸಾ 2**

ಮತ್ತು3 ರವರನ್ನು ಇಲಾಖಾ ವಾಹನದಲ್ಲೆ ಕರೆದುಕೊಂಡು ಹೋಗಲಾಯಿತು.

ಕೃತ್ಯ ನಡೆಯಿತು ಎನ್ನಲಾದ ಸ್ಥಳಕ್ಕೆ ಒಟ್ಟು 3 ಇಲಾಖಾ ವಾಹನದಲ್ಲಿ ಹೋಗಿದ್ದೆವು. ಬಸ್ ನಿಲ್ದಾಣದಿಂದ ಹೋಮ್ ಸ್ಟೇ ಗೆ ಅರ್ಧ ಕಿಮೀ ದೂರವಾಗುತ್ತದೆ. ಸದರಿ ಹೋಮ್ ಸ್ಟೇನ ಹೊರಗೆ 5 ವಾಹನಗಳು ನಿಂತಿದ್ದವು.

ಸದರಿ ಸ್ಥಳದಲ್ಲಿ ದ್ವಿಚಕ್ರ ವಾಹನಗಳು ಹಾಗೂ ಇತರ ವಾಹನಗಳು ಇದ್ದ ಬಗ್ಗೆ ನಾನು ಗಮನಿಸಿರುವುದಿಲ್ಲ. ಡಿಲೈಟ್ ಹೋಮ್ ಸ್ಟೆಯು ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಉತ್ತರಕ್ಕೆ ಅದರ ಪ್ರವೇಶ ದ್ವಾರ ಇರುತ್ತದೆ. ಸದರಿ ಹೋಮ್ ಸ್ಟೇಗೆ ಹಿಂಭಾಗದಲ್ಲಿ ಬಾಗಿಲು ಇರುವ ಬಗ್ಗೆ ಹಾಗೂ ಸದರಿ ಹೋಮ್ ಸ್ಟೇಗೆ ಎಷ್ಟು ಬಾಗಿಲುಗಳು ಇರುತ್ತವೆ ಎಂದು ನಾನು ನೋಡಿರುವುದಿಲ್ಲ. ಆರೋಪಿತರು ಜೂಜಾಟವನ್ನು ಕೆಳ ಅಂತಸ್ತಿನ ಮಹಡಿಯಲ್ಲಿ ಆಡುತ್ತಿದ್ದರು. ಸದರಿ ಹೋಮ್ ಸ್ಟೇ ಒಂದೇ ಅಂತಸ್ತಿನದ್ದಾಗಿರುತ್ತದೆ. ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ನಾವು ಸಮವಸ್ತ್ರದಲ್ಲೆ ಹೋಗಿದ್ದೆವು.

ರೂ.5,5,4140/- ಇತ್ತು ಎಂದು ನುಡಿದಿದ್ದು ಆ ರೀತಿ ಸದರಿ ಹಣ 3 ಟೇಬಲ್ ಗಳ ಮೇಲಿತ್ತು ಎನ್ನುತ್ತಾರೆ. ಯಾವ, ಯಾವ ಟೇಬಲ್ ನ ಮೇಲೆ ಎಷ್ಟೆಷ್ಟು ಹಣ ಇತ್ತು ಎಂದು ನನಗೆ ಹೇಳಲಾಗುವುದಿಲ್ಲ.

ನ್ಯಾಯಾಲಯದ ಮುಂದಿರುವ ಆರೋಪಿತರು ಇಂತಿಂತಹವರೇ ಹಾಗೂ ಅವರ ಹೆಸರು, ವಿಳಾಸ ನನಗೆ ಹೇಳಲಾಗುವುದಿಲ್ಲ. ವಶಕ್ಕೆ ಪಡೆಲಾಯಿತು ಎನ್ನಲಾದ ಹಣದ ಮುಖ ಬೆಲೆಯನ್ನು ನನಗೆ ಹೇಳಲಾಗುವುದಿಲ್ಲ.

Visit **ecourts.gov.in** for updates or download mobile app "**eCourts Services**" from Android or iOS

ನಿಪಿ.1 ರ ಮಹಜರ್ ನಲ್ಲಿರುವ ಎಲ್ಲಾ ವಿಚಾರಗಳನ್ನು ನನಗೆ ಈ ಸಮಯದಲ್ಲಿ ಹೇಳಲಾಗುವುದಿಲ್ಲ ಎಂದರೆ ಸರಿ.

ನಿಪಿ.1 ರಲ್ಲಿ ಮೊಬೈಲ್ ನ ಬಗ್ಗೆ ಬರೆದಿದ್ದು ಯಾವ, ಯಾವ ಕಂಪನಿಯ ಮೊಬೈಲ್ ಹಾಗೂ ಅವುಗಳ ನಂಬರ್ ಯಾವುದು ಎಂದು ನನಗೆ ಗೊತ್ತಿರುವುದಿಲ್ಲ. ನಿರ್ದಿಷ್ಟವಾಗಿ ಇಂತ ಮೊಬೈಲ್ ಇಂತ ವ್ಯಕ್ತಿಗೆ ಸೇರಿದ್ದು ಎಂಬ ಬಗ್ಗೆ ನನಗೆ ಹೇಳಲಾಗುವುದಿಲ್ಲ.

ವಶಕ್ಕೆ ಪಡೆದ ವಾಹನಗಳು ಇಂತಹವರದ್ದೆ ಎಂದು ನನಗೆ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ. ಸದರಿ ವಾಹನಗಳ ನೊಂದಣಿ ಸಂಖ್ಯೆ ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ.

ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು1 ರ ಹಣವನ್ನು ಕೃತ್ಯ ನಡೆದ ಸಮಯದಲ್ಲೇ ವಶಕ್ಕೆ ಪಡೆದ ಬಗ್ಗೇ ನಿರ್ದಿಷ್ಟ ಗುರುತಿಲ್ಲ ಎಂದರೆ ಸರಿ.

ನ್ಯಾಯಾಲಯದ ಮುಂದೆ ವಶಕ್ಕೆ ಪಡೆದ ಬೆಡ್ ಶೀಟ್ ಅಥವಾ ಟೇಬಲ್ ಗಳು ಇರುವುದಿಲ್ಲ ಎಂದರೆ ಸರಿ.

ನಿಪಿ.1 ರಲ್ಲಿ ಕೃತ್ಯ ನಡೆದಿದೆ ಎನ್ನಲಾದ ಸ್ಥಳದ ಅಕ್ಷಾಂಶ ಹಾಗೂ ರೇಖಾಂಶವನ್ನು ನಮೂದಿಸಲಾಗಿದ್ದು ಸದರಿ ಅಕ್ಷಾಂಶ ಹಾಗೂ ರೇಖಾಂಶವನ್ನು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ.

ನ್ಯಾಯಾಲಯದ ಮುಂದಿರುವ ಮುದ್ದೆಮಾಲು 2 ರ 52 ಇಸ್ಪೀಟ್ ಎಲೆಗಳು ಪ್ರಕರಣಕ್ಕೆ ಸೇರಿದ್ದು ಎಂಬ ಬಗ್ಗೆ ಯಾವುದೇ ಕುರುಹುಗಳು ಇರುವುದಿಲ್ಲ ಎಂದರೆ ಸರಿ.

Visit **ecourts.gov.in** for updates or download mobile app "**eCourts Services**" from Android or iOS

**ವಶಕ್ಕೆ ಪಡೆಯಲಾಯಿತು ಎನ್ನಲಾದ ಮೊಬೈಲ್ ಗಳಿಗೆ ಸಂಬಂಧಿಸಿ ಮೊಬೈಲ್ ಪರಿಣತಿ ಹೊಂದಿರುವವರನ್ನು ಕರೆಸಿ ಮೌಲ್ಯದ ಬಗ್ಗೆ ಪರೀಶೀಲಿಸಲಾಗಿತ್ತೆ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇರುವುದಿಲ್ಲ. ಯಾವ ಯಾವ ಮೊಬೈಲ್ ಗೆ ಎಷ್ಟೆಷ್ಟು ಬೆಲೆ ಇರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ.**

**ಕೃತ್ಯ ನಡೆದಿದೆ ಎನ್ನಲಾದ ದಿನ ಸ್ಥಳದಲ್ಲಿದ್ದ ಆರೋಪಿತರೆ ಈ ದಿನ ನ್ಯಾಯಾಲಯದ ಮುಂದೆ ವ್ಯಕ್ತಿಗಳಾಗಿರುತ್ತಾರೆ ಎಂದು ನನಗೆ ನಿರ್ದಿಷ್ಟವಾಗಿ ಗುರುತಿಸಲಾಗುವುದಿಲ್ಲ ಎಂದರೆ ಸರಿ."**

17. ಈ ಮೇಲ್ಕಂಡ ಪಾಟೀ ಸವಾಲಿನ ಅಂಶವನ್ನು ಪರಿಶೀಲಿಸಲಾಗಿ ಸಾಕ್ಷಿಯು ಚಾಸಾ.2 ಹಾಗೂ ಚಾಸಾ.3 ರವರನ್ನು ಚಾಸಾ.1 ರವರು ಕರೆದುಕೊಂಡು ಬಂದಿರುತ್ತಾರೆಂಬುದಾಗಿ, ಅಲ್ಲದೇ ಚಾಸಾ2 ಹಾಗೂ 3 ರವರು ಸದರಿ ಸಮಯದಲ್ಲಿ ಬಸ್ ನಿಲ್ದಾಣದ ಎಡಬದಿಯಲ್ಲಿ ನಿಂತಿದ್ದರೆಂಬುದಾಗಿ ನುಡಿದಿರುತ್ತಾರೆ. ಸದರಿ ಸಾಕ್ಷಿಗೆ ಚಾಸಾ 2 ಹಾಗೂ 3 ರವರ ಹೆಸರು, ವಿಳಾಸದ ಬಗ್ಗೆ ಮಾಹಿತಿ ಇರುತ್ತದೆಯೇ ಎಂದು ಕೇಳಿದ ಪ್ರಶ್ನೆಗೆ ಸದರಿ ಸಾಕ್ಷಿಯು ತನಗೆ ಗೊತ್ತಿರುವುದಿಲ್ಲವೆಂಬುದಾಗಿ, ಚಾಸಾ.2 ಮತ್ತು ಚಾಸಾ.3 ರವರನ್ನು ಇಲಾಖಾ ವಾಹನದಲ್ಲೇ ಕರೆದುಕೊಂಡು ಹೋಗಲಾಯಿತೆಂಬುದಾಗಿ ನುಡಿದಿರುತ್ತಾರೆ. ಕೃತ್ಯ ನಡೆಯಿತು ಎನ್ನಲಾದ ಸ್ಥಳಕ್ಕೆ ಒಟ್ಟು 3 ಇಲಾಖಾ ವಾಹನದಲ್ಲಿ ಹೋಗಿದ್ದೆವೆಂಬುದಾಗಿ, ಸದರಿ ಸ್ಥಳದಲ್ಲಿ ದ್ವಿಚಕ್ರ ವಾಹನಗಳು ಹಾಗೂ ಇತರ ವಾಹನಗಳು ಇದ್ದ ಬಗ್ಗೆ ತಾನು ಗಮನಿಸಿರುವುದಿಲ್ಲವೆಂಬುದಾಗಿ ನುಡಿದಿರುತ್ತಾರೆ. ಸದರಿ ಸಾಕ್ಷಿಯು ಡಿಲೈಟ್ ಹೋಮ್ ಸ್ಟೆಯು ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಉತ್ತರಕ್ಕೆ ಅದರ ಪ್ರವೇಶ

ದ್ವಾರವಿರುವುದಾಗಿ, ಸದರಿ ಹೋಮ್‌ಸ್ಟೇಗೆ ಹಿಂಭಾಗದಲ್ಲಿ ಬಾಗಿಲು ಇರುವ ಬಗ್ಗೆ ಹಾಗೂ ಸದರಿ ಹೋಮ್ ಸ್ಟೇಗೆ ಎಷ್ಟು ಬಾಗಿಲುಗಳು ಇರುತ್ತವೆ ಎಂದು ತಾನು ನೋಡಿರುವುದಿಲ್ಲವೆಂಬುದಾಗಿ, ಆರೋಪಿತರು ಜೂಜಾಟವನ್ನು ಕೆಳ ಅಂತಸ್ತಿನ ಮಹಡಿಯಲ್ಲಿ ಆಡುತ್ತಿದ್ದರೆಂಬುದಾಗಿ ನುಡಿದಿರುತ್ತಾರೆ. ಅಲ್ಲದೇ ರೂ.5,5,4140/- ಇತ್ತು ಎಂಬುದಾಗಿ ನುಡಿದಿದ್ದು, ಆ ರೀತಿ ಸದರಿ ಹಣ 3 ಟೇಬಲ್‌ಗಳ ಮೇಲಿತ್ತು, ಯಾವ, ಯಾವ ಟೇಬಲ್‌ನ ಮೇಲೆ ಎಷ್ಟೆಷ್ಟು ಹಣ ಇತ್ತು ಎಂದು ತನಗೆ ಹೇಳಲಾಗುವುದಿಲ್ಲವೆಂಬುದಾಗಿ ನುಡಿದಿರುತ್ತಾರೆ. ಅಲ್ಲದೇ ನ್ಯಾಯಾಲಯದ ಮುಂದಿರುವ ಆರೋಪಿತರು ಇಂತಿಂತಹವರೇ ಹಾಗೂ ಅವರ ಹೆಸರು, ವಿಳಾಸ ತನಗೆ ಹೇಳಲಾಗುವುದಿಲ್ಲ ಹಾಗೂ ವಶಕ್ಕೆ ಪಡೆಲಾಯಿತು ಎನ್ನಲಾದ ಹಣದ ಮುಖ ಬೆಲೆಯನ್ನು ತನಗೆ ಹೇಳಲಾಗುವುದಿಲ್ಲವೆಂಬುದಾಗಿ ನುಡಿದ ಅಂಶವನ್ನು ಪರಿಶೀಲಿಸಿದಾಗ ಕೃತ್ಯದ ಬಗ್ಗೆಯೇ ಹಾಗೂ ಆರೋಪಿತರ ಗುರುತಿಸುವಿಕೆ ಬಗ್ಗೆ ಸ್ಪಷ್ಟತೆ ಇಲ್ಲದೇ ಇರುವುದು ಕಂಡು ಬರುತ್ತದೆ. ಹಾಗೂ ನಿಪಿ.1 ರ ಮಹಜರ್ ನಲ್ಲಿರುವ ಎಲ್ಲಾ ವಿಚಾರಗಳನ್ನು ತನಗೆ ಈ ಸಮಯದಲ್ಲಿ ಹೇಳಲಾಗುವುದಿಲ್ಲ ಎಂಬುದಾಗಿ ಸ್ಪಷ್ಟವಾಗಿ ನುಡಿದಿರುತ್ತಾರೆ. ಸದರಿ ಸಾಕ್ಷಿಯು ನಿಪಿ.1 ರಲ್ಲಿ ಮೊಬೈಲ್ ನ ಬಗ್ಗೆ ಬರೆದಿದ್ದು ಯಾವ, ಯಾವ ಕಂಪನಿಯ ಮೊಬೈಲ್ ಹಾಗೂ ಅವುಗಳ ನಂಬರ್, ಯಾವುದು ಎಂದು ತನಗೆ ಗೊತ್ತಿಲ್ಲ ಎಂಬುದಾಗಿ, ನಿರ್ದಿಷ್ಟವಾಗಿ ಇಂತ ಮೊಬೈಲ್ ಇಂತ ವ್ಯಕ್ತಿಗೆ ಸೇರಿದ್ದು ಎಂಬ ಬಗ್ಗೆ ತನಗೆ ಹೇಳಲಾಗುವುದಿಲ್ಲವೆಂಬುದಾಗಿ ನುಡಿದಿರುತ್ತಾರೆ. ಅಲ್ಲದೇ ವಶಕ್ಕೆ ಪಡೆದ ವಾಹನಗಳು ಇಂತಹವರದ್ದೆ ಎಂದು ತನಗೆ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ ಎಂಬುದಾಗಿ ಹಾಗೂ ಸದರಿ ವಾಹನಗಳ ನೊಂದಣಿ ಸಂಖ್ಯೆ ತನಗೆ ಹೇಳಲಾಗುವುದಿಲ್ಲ ಎಂಬುದಾಗಿ ಸ್ಪಷ್ಟವಾಗಿ

ನುಡಿದಿರುತ್ತಾರೆ. ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು1ರ ಹಣವನ್ನು ಕೃತ್ಯ ನಡೆದ ಸಮಯದಲ್ಲೇ ವಶಕ್ಕೆ ಪಡೆದ ಬಗ್ಗೇ ನಿರ್ದಿಷ್ಟ ಗುರುತಿಲ್ಲ ಹಾಗೂ ನ್ಯಾಯಾಲಯದ ಮುಂದೆ ವಶಕ್ಕೆ ಪಡೆದ ಬೆಡ್ ಶೀಟ್ ಅಥವಾ ಟೇಬಲ್ ಗಳು ಇರುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಅಲ್ಲದೇ ನಿಪಿ.1 ರಲ್ಲಿ ಕೃತ್ಯ ನಡೆದಿದೆ ಎನ್ನಲಾದ ಸ್ಥಳದ ಅಕ್ಷಾಂಶ ಹಾಗೂ ರೇಖಾಂಶವನ್ನು ನಮೂದಿಸಲಾಗಿದ್ದು ಸದರಿ ಅಕ್ಷಾಂಶ ಹಾಗೂ ರೇಖಾಂಶವನ್ನು ತನಗೆ ಹೇಳಲಾಗುವುದಿಲ್ಲವೆಂಬುದಾಗಿ, ನ್ಯಾಯಾಲಯದ ಮುಂದಿರುವ ಮುದ್ದೆಮಾಲು-2ರ 52 ಇಸ್ಪೀಟ್ ಎಲೆಗಳು ಪ್ರಕರಣಕ್ಕೆ ಸೇರಿದ್ದು ಎಂಬ ಬಗ್ಗೆ ಯಾವುದೇ ಕುರುಹುಗಳು ಇರುವುದಿವೆಂಬುದಾಗಿ ಹಾಗೂ ವಶಕ್ಕೆ ಪಡೆಯಲಾಯಿತು ಎನ್ನಲಾದ ಮೊಬೈಲ್ ಗಳಿಗೆ ಸಂಬಂಧಿಸಿ ಮೊಬೈಲ್ ಪರಿಣತಿ ಹೊಂದಿರುವವರನ್ನು ಕರೆಸಿ ಮೌಲ್ಯದ ಬಗ್ಗೆ ಪರೀಶೀಲಿಸಲಾಗಿತ್ತೆ ಎಂದರೆ ತನಗೆ ಆ ಬಗ್ಗೆ ಮಾಹಿತಿ ಇರುವುದಿಲ್ಲ ಮತ್ತು ಯಾವ ಯಾವ ಮೊಬೈಲ್ ಗೆ ಎಷ್ಟೆಷ್ಟು ಬೆಲೆ ಇರುತ್ತದೆ ಎಂಬ ಬಗ್ಗೆ ತನಗೆ ಗೊತ್ತಿರುವುದಿಲ್ಲವೆಂಬುದಾಗಿ ನುಡಿದ ಅಂಶವನ್ನುಪರಿಶೀಲಿಸಿದಾಗ್ಯೂ ಸಹ ಕೃತ್ಯದ ಬಗ್ಗೆ ಸಾಕಷ್ಟು ಸಂಶಯ ವ್ಯಕ್ತವಾಗುತ್ತದೆ. ಅಲ್ಲದೇ ಕೃತ್ಯ ನಡೆದಿದೆ ಎನ್ನಲಾದ ದಿನ ಸ್ಥಳದಲ್ಲಿದ್ದ ಆರೋಪಿತರೇ ಈ ದಿನ ನ್ಯಾಯಾಲಯದ ಮುಂದೆ ವ್ಯಕ್ತಿಗಳಾಗಿರುತ್ತಾರೆ ಎಂದು ತನಗೆ ನಿರ್ದಿಷ್ಟವಾಗಿ ಗುರುತಿಸಲಾಗುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ ಘಟನೆ ಘಟಿಸಿದ್ದರ ಬಗ್ಗೆ ಹಾಗೂ ಮುದ್ದೆ ಮಾಲಿನ ಬಗ್ಗೆ ಸಂಶಯ ವ್ಯಕ್ತವಾಗುತ್ತದೆ. ಅಲ್ಲದೇ ಆರೋಪಿತರೇ ಸದರಿ ಕೃತ್ಯದಲ್ಲಿ ಬಾಗಿಯಾದ ಆರೋಪಿತರು ಆಗಿರುತ್ತಾರೆಯೋ ಎಂಬುದರ ಬಗ್ಗೆ ಸಂಶಯ ವ್ಯಕ್ತವಾಗುತ್ತದೆ.

Visit **ecourts.gov.in** for updates or download mobile app "**eCourts Services**" from Android or iOS

**18.** ಅಭಿಯೋಜನೆಯು ಆರೋಪಿತರ ಮೇಲಿನ ಆರೋಪವನ್ನು ಸಾಬೀತುಪಡಿಸುವ ಸಲುವಾಗಿ ಚಾಸಾ-15/ಪ್ರಾಸಾ-5 ಇವರು ತನಿಖೆಯನ್ನು ಕೈಗೊಂಡು ಆರೋಪಿತರ ವಿರುದ್ಧ ದೋಷಾರೋಪಣಾಪತ್ರವನ್ನು ಸಲ್ಲಿಸಿದ ಬಗ್ಗೆ ಸಾಕ್ಷಿಯನ್ನಾಗಿ ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ದಿನಾಂಕ:24/09/2022 ರಂದು ತಾನು ರಾತ್ರಿ ಠಾಣಾ ಎಸ್ ಹೆಚ್ ಒ ಕರ್ತವ್ಯದಲ್ಲಿರುವಾಗ, ರಾತ್ರಿ 12-30 ಗಂಟೆ ಸಮಯದಲ್ಲಿ ಚಾಸಾ1 ರವರು ಠಾಣೆಗೆ ಹಾಜರಾಗಿ ಸ್ವತ್ತುಗಳು, ಆರೋಪಿತರು ಮತ್ತು ಮಹಜರಿನೊಂದಿಗೆ ಹಾಜರಾಗಿ ನೀಡಿದ ವರದಿಯನ್ನು ಪಡೆದುಕೊಂಡು ಠಾಣಾ ಎನ್.ಸಿ. ನಂಬರ್ 112/2022 ರಲ್ಲಿ ದಾಖಲಿಸಿಕೊಂಡಿರುತ್ತೇನೆಂತಲೂ, ನಂತರ ಅದೇ ದಿನ ಸದರಿ ಪ್ರಕರಣ ಅಸಂಜ್ಞೇಯ ಅಪರಾಧವಾಗಿದ್ದರಿಂದ ನ್ಯಾಯಾಲಯದ ಅನುಮತಿ ಪಡೆದುಕೊಂಡು ಜೂಜಾಡುತ್ತಿದ್ದ ಆಸಾಮಿಗಳ ವಿರುದ್ಧ ಕಲಂ 80 ಕರ್ನಾಟಕ ಪೊಲೀಸ್ ಕಾಯ್ಕೆ ರೀತ್ಯಾ ಪ್ರಕರಣ ದಾಖಲಿಸಿ, ತನಿಖೆ ಮಾಡಲು ಅನುಮತಿಗಾಗಿ ನ್ಯಾಯಾಲಯದಲ್ಲಿ ಕೋರಿಕೊಂಡಿರುತ್ತೇನೆಂತಲೂ, ನಂತರ ಅದೇ ದಿನ ಬೆಳಿಗ್ಗೆ 10-45 ಗಂಟೆ ಸಮುಯದಲ್ಲಿ ಕೊಪ್ಪ ನ್ಯಾಯಾಲಯದಿಂದ ಪಿ.ಸಿ.690, ದರ್ಶನ್ ರವರು ನ್ಯಾಯಾಲಯದ ಆದೇಶದ ಪ್ರತಿಯನ್ನು ತಂದು ಹಾಜರುಪಡಿಸಿದ ಮೇರೆಗೆ, ನ್ಯಾಯಾಲಯವು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿ, ತನಿಖೆ ಮಾಡಲು ಅನುಮತಿ ನೀಡಿದ್ದರಿಂದ ಠಾಣಾ ಮೊಕದ್ದಮೆ ಸಂಖ್ಯೆ 64/2022 ರಲ್ಲಿ ಕಲಂ 80 ಕರ್ನಾಟಕ ಪೊಲೀಸ್ ಕಾಯ್ದೆ ರೀತ್ಯಾ ಪ್ರಕರಣ ದಾಖಲು ಮಾಡಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂತಲೂ, ನಂತರ ಅದೇ ದಿನ ಸದರಿ ಪ್ರಕರಣದಲ್ಲಿ ಅಮಾತನುಪಡಿಸಿಕೊಂಡ 52 ಇಸ್ಪೀಟ್ ಎಲೆಗಳು, 5 ಲಕ್ಷದ

140 ನಗದು ಹಣ, 3 ಬೆಡ್ ಶೀಟ್ ಗಳು 3 ಮರದ ಟೇಬಲ್ ಗಳು, ಒಂದು ಪ್ಲಾಸ್ಟಿಕ್ ಬಾಕ್ಸ್ , 34 ಪ್ಲಾಸ್ಟಿಕ್ ಚೇರುಗಳು, 4 ಕಾರುಗಳು, 39 ಮೊಬೈಲ್ ಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 58/2022 ರಲ್ಲಿ ನಮೂದಿಸಿ ನ್ಯಾಯಾಲಯದ ಅನುಮತಿ ಪಡೆದಿರುತ್ತೇನೆಂತಲೂ, ನಂತರ ಪ್ರಕರಣದ ಚಾಸಾ 1 ರವರು ಠಾಣೆಗೆ ಕರೆದುಕೊಂಡು ಬಂದಿದ್ದ 35 ಜನ ಆರೋಪಿಗಳಿಗೆ 41 ಸಿ.ಆರ್.ಪಿ.ಸಿ. ರೀತ್ಯಾ ನೋಟಿಸ್ ಜಾರಿ ಮಾಡಿರುತ್ತೇನೆಂತಲೂ, ನಂತರ ಅದೇ ದಿನ ಪ್ರಕರಣದ ಸಾಕ್ಷಿದಾರರಾದ ಚಾಸಾ 2 ರಿಂದ ಚಾಸಾ 11 ರವರ ಹೇಳಿಕೆ ಪಡೆದಿರುತ್ತೇನೆಂತಲೂ, ಚಾಸಾ 12 ರವರಿಂದ ಕಲಂ 65 ಬಿ ದೃಡೀಕರಣ ಪಡೆದಿರುತ್ತೇನೆಂತಲೂ, ದಿ:26/09/2022 ರಂದು ಪ್ರಕರದಣಲ್ಲಿ ಕೃತ್ಯ ನಡೆದ ಸ್ಥಳದ ದಾಖಲಾತಿ ಕೋರಿ ಚಾಸಾ14 ರವರಿಗೆ ಮನವಿ ನೀಡಿರುತ್ತೇನೆಂತಲೂ, ಅದೇ ದಿನ ಪ್ರಕರಣದ 35 ನೇ ಆರೋಪಿಯಿಂದ ಸದರಿ ಹೋಮ್ ಸ್ಟೇಯ ಎಲ್ಲಾ ದಾಖಲಾತಿಗಳನ್ನು ತಂದು ಹಾಜರುಪಡಿಸುವಂತೆ ಸೂಚನೆ ನೀಡಿರುತ್ತೇನೆಂತಲೂ, ನಂತರ ಅದೇ ದಿನ ಚಾಸಾ 14 ರವರು ನೀಡಿದ ವರದಿಯನ್ನು ಪಡೆದಿರುತ್ತೇನೆಂತಲೂ, ಅದೇ ದಿನ ಸದರಿ ಪ್ರಕರಣದ 35 ನೇ ಆರೋಪಿ ಕೃತ್ಯ ನಡೆದಿದೆ ಎನ್ನಲಾದ ಸ್ಥಳದ ದಾಖಲಾತಿಯನ್ನು ಹಾಜರುಪಡಿಸಿರುತ್ತಾರೆಂತಲೂ, ದಿನಾಂಕ:27/09/2022 ರಂದು ಪ್ರಕರಣದಲ್ಲಿ ಕೃತ್ಯಕ್ಕೆ ಸಂಬಂಧಿಸಿದ ಅಮಾನತುಪಡಿಸಿಕೊಂಡಿದ್ದ ಸ್ವತ್ತುಗಳನ್ನು 35 ನೇ ಆರೋಪಿಯು ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿದ್ದು ಸದರಿ ನ್ಯಾಯಾಲಯದ ಆದೇಶದ ಮೇರೆಗೆ ದಿನಾಂಕ:29/09/2022 ರಂದು ವಾಹನ ಬಿಡುಗಡೆ ಮಹಜರನ್ನು ಜರುಗಿಸಿದ್ದು ಸದರಿ ಮಹಜರಿನ ಕಾಲಕ್ಕೆ ಕೆಎ-19/ಎಂ.ಎಚ್-6820 ನಂಬರಿನ ನಿಸಾನ್ ಟೋರೆನೊ ಕಾರನ್ನು ಆರ್ ಸಿ ಮಾಲೀಕರಿಗೆ ಬಿಡುಗಡೆ ಮಾಡಿದ್ದು, ಸದರಿ ಮಹಜರನ್ನು 8 ರಿಂದ

Visit ecourts.gov.in for updates or download mobile app "eCourts Services" from Android or iOS

8-30 ಗಂಟೆವರೆಗೆ ಜರುಗಿಸಿ ಫೋಟೊ ತೆಗೆಯಲಾಗಿರುತ್ತದೆಂತಲೂ, ಆ ಸಮಯದಲ್ಲಿ ವಿಷ್ಣು ಬಿನ್ ಅಣ್ಣಪ್ಪ ಹಾಗೂ ಶಿವಕುಮಾರ್ ಅವರ ಸಮಕ್ಷಮದಲ್ಲಿ ಮಹಜರ್ ಜರುಗಿಸಿರುತ್ತೇನೆಂತಲೂ, ಸದರಿ ದಾಖಲೆಯನ್ನು ನಿಪಿ.9 ಎಂದು, ತನ್ನ ಸಹಿಯನ್ನು ನಿಪಿ.9 ಎ ಎಂದೂ, 2 ಫೋಟೋಗಳನ್ನು ನಿಪಿ.10 ಹಾಗೂ ನಿಪಿ.11 ಎಂದು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

19. ಸದರಿ ಸಾಕ್ಷಿಯು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 30/09/2022 ರಂದು ಸ್ವತ್ತುಗಳ ಬಿಡುಗಡೆ ಮಹಜರನ್ನು ಅನಿಲ್ ಡಿಮೆಲ್ಲೋ ಹಾಗೂ ಪ್ರವೀಣ ರವರ ಸಮಕ್ಷಮದಲ್ಲಿ ಮಹಜರ್ ಜರುಗಿಸಿದ್ದು, ಸದರಿ ಪ್ರಕರಣದ 3 ಮರದ ಟೇಬಲ್ ಗಳು 2 ಬ್ಲಾಂಕೆಟ್, ಒಂದು ಬೆಡ್ ಶೀಟ್, 3-4 ಫೈಬರ್ ಚೇರುಗಳನ್ನು ಬಿಡುಗಡೆ ಮಾಡಿ ಸದರಿ ಮಹಜರನ್ನು 8 ರಿಂದ 8-30 ವರಗೂ ಜರುಗಿಸಿರುತ್ತೇನೆಂತಲೂ, ಸದರಿ ಮಹಜರನ್ನು ನಿಪಿ12 ಎಂದು, ತನ್ನ ಸಹಿಯನ್ನು ನಿಪಿ.12 ಎ ಎಂದೂ, 2 ಫೋಟೋಗಳನ್ನು ನಿಪಿ.13 ಹಾಗೂ ನಿಪಿ.14 ಎಂದು, ದಿಃ03/10/2022 ರಂದು ವಾಹನ ಬಿಡುಗಡೆ ಮಹಜರನ್ನು ಜರುಗಿಸಿ ಸದರಿ ಪ್ರಕರಣದ ಕೆಎ-41/ಪಿ-6793 ರ ನಂಬರಿನ ಮಾರುತಿ ಸುಜುಕಿ ವಾಹನದ ಮಹಜರನ್ನು ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ 7 ರಿಂದ 7-20 ಗಂಟೆವರೆಗೆ ಜರುಗಿಸಿರುತ್ತೇನೆಂತಲೂ, ಸದರಿ ಮಹಜರನ್ನು ನಿಪಿ.15 ಹಾಗೂ ತನ್ನ ಸಹಿಯನ್ನು ನಿಪಿ.15 ಎ ಎಂದೂ, 4 ಫೋಟೋಗಳನ್ನು ನಿಪಿ.16 ರಿಂದ ನಿಪಿ.19 ಎಂದು, ದಿಃ03/10/2022 ರಂದು ವಾಹನ ಬಿಡುಗಡೆ ಮಹಜರ್ ಕ್ರಮ ಜರುಗಿಸಿದ್ದು, ಪ್ರಕರಣಕ್ಕೆ ಸಂಬಂಧಿಸಿದ ಕೆಎ-20/ಎಂ.ಎ-3558 ನಂಬರಿನ ಫೋರ್ಡ್ ಎಕೋ ಸ್ಪೋರ್ಟ್ ನ

Visit **ecourts.gov.in** for updates or download mobile app "**eCourts Services**" from Android or iOS

ವಾಹನವನ್ನು ಅದರ ಜಿಪಿಎ ಅವರಿಗೆ ಬಿಡುಗಡೆ ಮಾಡಲು ಸಾಕ್ಷಿದಾರರಾದ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಮಹಜರನ್ನು 7-25 ರಿಂದ 7-45 ಗಂಟೆವರೆಗೆ ಜರುಗಿಸಿರುತ್ತೇನೆಂತಲೂ, ಸದರಿ ಮಹಜರನ್ನು ನಿಪಿ.20 ಎಂದು, ತನ್ನ ಸಹಿಯನ್ನು ನಿಪಿ.20 ಎ ಎಂದೂ ಹಾಗೂ 2 ಫೋಟೋಗಳನ್ನು ನಿಪಿ.21 ಹಾಗೂ ನಿಪಿ.22 ಎಂದು, ದಿಃ03/10/2022 ರಂದು ಮೊಬೈಲ್ ಬಿಡುಗಡೆ ಮಹಜರ್ ಮಾಡಿದ್ದು ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಕೃತ್ಯಕ್ಕೆ ಸಂಬಂದಿಸಿದ ಸ್ಯಾಮ್ ಸಂಗ್ ನ ಕಪ್ಪು ಬಣ್ಣದ ಕಪ್ಪು ಬಣ್ಣದ ಮೊಬೈಲ್ ಅನ್ನು 7-15 ರಿಂದ 7-30 ಗಂಟೆವೆರೆಗೆ ಜರುಗಿಸಿದ್ದು, ಸದರಿ ಮಹಜರನ್ನು ನಿಪಿ.23 ಎಂದು, ತನ್ನ ಸಹಿಯನ್ನು ನಿಪಿ.23 ಎ ಹಾಗೂ ಫೋಟೋವನ್ನು ನಿಪಿ.24 ಎಂದು, ದಿಃ03/10/2022 ರಂದು ಮಹಜರ್ ಕ್ರಮ ಜರುಗಿಸಿದ್ದು ಸ್ಯಾಮ್ ಸಂಗ್ ನ ನೀಲಿ ಬಣ್ಣದ ಮೊಬೈಲನ್ನು ಗಣೇಶ್ ಹಾಗೂ ಶಿವಕುಮಾರ್ ಅವರ ಸಮಕ್ಷಮ 8 ರಿಂದ 8-30 ಗಂಟೆವೆರೆಗೆ ಮಹಜರ್ ಕ್ರಮ ಜರುಗಿಸಿ ಬಿಡುಗಡೆ ಮಾಡಿರುತ್ತೇನೆಂತಲೂ, ಸದರಿ ಮಹಜರನ್ನು ನಿಪಿ.25 ಎಂದು, ತನ್ನ ಸಹಿಯನ್ನು ನಿಪಿ.25 ಎ ಎಂದು, ಫೋಟೋವನ್ನು ನಿಪಿ.26 ಎಂದು, ಸ್ಯಾಮ್ ಸಂಗ್ ಮೊಬೈಲ್ ಅನ್ನು ಗಣೇಶ್ ಹಾಗೂ ಶಿವಕುಮಾರ್ ಅವರ ಸಮಕ್ಷಮ 8-40 ರಿಂದ 9 ಗಂಟೆವರೆಗೆ ಜರುಗಿಸಿದ್ದು ಮಹಜರನ್ನು ನಿಪಿ.27 ಹಾಗೂ ತನ್ನ ಸಹಿಯನ್ನು ನಿಪಿ.27 ಎ ಎಂದು, ಫೋಟೋವನ್ನು ನಿಪಿ.28 ಎಂದು, ಸ್ಯಾಮ್ ಸಂಗ್ ಕಂಪನಿಯ ಕೀ ಪ್ಯಾಡ್ ಮಾಲೀಕರಾದ ಮಹಜರ್ ಸಾಕ್ಷಿಗಳ ಸಮಕ್ಷಮ 9 ರಿಂದ 9-20 ಗಂಟೆವರೆಗೆ ಜರುಗಿಸಿದ್ದು, ಸದರಿ ಮಹಜರನ್ನು ನಿಪಿ.29 ಎಂದು, ತನ್ನ ಸಹಿಯನ್ನು ನಿಪಿ.29 ಎ, ಹಾಗೂ ಫೋಟೋವನ್ನು ನಿಪಿ.30 ಎಂದು, ದಿಃ03/10/2022 ರಂದು ಮೊಬೈಲ್ ಬಿಡುಗಡೆ ಮಹಜರನ್ನು ಜರುಗಿಸಿ ಕಪ್ಪು ಬಣ್ಣದ ಸ್ಮಾರ್ಟ್ ಫೋನನ್ನು ರಾತ್ರಿ 9 ರಿಂದ

Visit **ecourts.gov.in** for updates or download mobile app "**eCourts Services**" from Android or iOS

9-20 ಗಂಟೆವರೆಗೆ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಜರುಗಿಸಿದ್ದು ಸದರಿ ಮಹಜರನ್ನು ನಿಪಿ.31 ಎಂದು, ತನ್ನ ಸಹಿಯನ್ನು ನಿಪಿ.31ಎ ಎಂದು, ದಿಃ03/10/2022 ರಂದು ಸ್ಯಾಮ್ ಸಂಗ್ ನೀಲಿ ಬಣ್ಣದ ಮೊಬೈಲ್ ಬಿಡುಗಡೆ ಮಹಜರನ್ನು ಜರುಗಿಸಿ 9-30 ರಿಂದ 9-50 ರವರೆಗೂ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಜರುಗಿಸಿದ್ದು, ಸದರಿ ಮಹಜರನ್ನು ನಿಪಿ.32 ಎಂದು, ತನ್ನ ಸಹಿಯನ್ನು ನಿಪಿ.32ಎ ಎಂದು, ಫೋಟೋವನ್ನು ನಿಪಿ.33 ಎಂದು, ದಿಃ03/10/2022 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಒನ್ ಪ್ಲಸ್ ಕಂಪನಿಯ ಬಿಡುಗಡೆ ಮಹಜರನ್ನು ಜರುಗಿಸಿ 9-55 ರಿಂದ 10-15 ಗಂಟೆವರೆಗೆ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಜರುಗಿಸಿದ್ದು, ಸದರಿ ಮಹಜರನ್ನು ನಿಪಿ.33 ಎಂದು, ತನ್ನ ಸಹಿಯನ್ನು ನಿಪಿ.33ಎ ಎಂದು, ಫೋಟೋವನ್ನು ನಿಪಿ.34 ಎಂದು, ದಿಃ03/10/2022 ರಂದು ಪ್ರಕರಣದ ವಿವೊ ಕಂಪನಿಯ ಸ್ಮಾರ್ಟ್ ಫೋನ್ ಮೊಬೈಲ್ ಬಿಡುಗಡೆ ಮಹಜರನ್ನು ಜರುಗಿಸಿ 10-30 ರಿಂದ 10-45 ಗಂಟೆವರೆಗೆ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಜರುಗಿಸಿದ್ದು ಸದರಿ ಮಹಜರನ್ನು ನಿಪಿ.35 ಎಂದು, ತನ್ನ ಸಹಿಯನ್ನು ನಿಪಿ.35ಎ ಎಂದು, ಫೋಟೋವನ್ನು ನಿಪಿ.36 ಎಂದು, ದಿಃ03/10/2022 ರಂದು ರೆಡ್ ಮೀ ಯ ಸ್ಮಾರ್ಟ್ ಮತ್ತು ಒನ್ ಪ್ಲಸ್ ಮೊಬೈಲ್ ಗಳನ್ನು ಬಿಡುಗಡೆ ಮಹಜರನ್ನು 10-50 ರಿಂದ 11-10 ಗಂಟೆವರೆಗೆ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಜರುಗಿಸಿದ್ದು, ಸದರಿ ಮಹಜರನ್ನು ನಿಪಿ.37 ಎಂದು, ತನ್ನ ಸಹಿಯನ್ನು ನಿಪಿ.37ಎ ಎಂದು, ಫೋಟೋವನ್ನು ನಿಪಿ.38 ಎಂದು, ದಿಃ03/10/2022 ರಂದು ವಿವೋ ಕಂಪನಿಯ ಮೊಬೈಲ್ ಸ್ಮಾರ್ಟ ಫೋನ್ ಬಿಡುಗಡೆ ಮಹಜರನ್ನು 11-15 ರಿಂದ 11-35 ಗಂಟೆವರೆಗೆ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ

Visit **ecourts.gov.in** for updates or download mobile app “**eCourts Services**” from Android or iOS

ಜರುಗಿಸಿದ್ದು, ಸದರಿ ಮಹಜರನ್ನು ನಿಪಿ.39 ಎಂದು, ತನ್ನ ಸಹಿಯನ್ನು ನಿಪಿ.39 ಎ ಎಂದು, ಫೋಟೋವನ್ನು ನಿಪಿ.40 ಎಂದು, ದಿಃ03/10/2022 ರಂದು ಒನ್ ಪ್ಲಸ್ ನ ಸ್ಮಾರ್ಟ ಮೊಬೈಲ್ ಬಿಡುಗಡೆ ಮಹಜರನ್ನು 11-40 ರಿಂದ 12-00 ಗಂಟೆವರೆಗೆ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಜರುಗಿಸಿದ್ದು ಸದರಿ ಮಹಜರನ್ನು ನಿಪಿ.41 ಎಂದು, ತನ್ನ ಸಹಿಯನ್ನು ನಿಪಿ.41 ಎ ಎಂದು, ಫೋಟೋವನ್ನು ನಿಪಿ.42 ಎಂದು, ದಿಃ04/10/2022 ರಂದು ವಿವೋ ಕಂಪನಿಯ ಮೊಬೈಲ್ ಸ್ಮಾಟ್ ಫೋನ್ ಬಿಡುಗಡೆ ಮಹಜರನ್ನು 12-05 ರಿಂದ 12-25 ಗಂಟೆವರೆಗೆ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಜರುಗಿಸಿದ್ದು, ಸದರಿ ಮಹಜರನ್ನು ನಿಪಿ.43 ಎಂದು, ತನ್ನ ಸಹಿಯನ್ನು ನಿಪಿ.43 ಎ ಎಂದು, ಫೋಟೋವನ್ನು ನಿಪಿ.44 ಎಂದು, ದಿಃ04/10/2022 ರಂದು ವಿವೋ ನ ಕಪ್ಪು ಬಣ್ಣದ ಸ್ಮಾರ್ಟ್ ಮೊಬೈಲ್ ಬಿಡುಗಡೆ ಮಹಜರನ್ನು 12-30 ರಿಂದ 12-50 ಗಂಟೆವರೆಗೆ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಜರುಗಿಸಿದ್ದು, ಸದರಿ ಮಹಜರನ್ನು ನಿಪಿ.45 ಎಂದು, ತನ್ನ ಸಹಿಯನ್ನು ನಿಪಿ.45 ಎ ಎಂದು, ಫೋಟೋವನ್ನು ನಿಪಿ.46 ಎಂದು, ದಿಃ21/10/2022 ರಂದು ಪ್ರಕರಣದ ಸ್ಯಾಮ್ ಸಂಗ್ ಜೆ 7 ವ್ಯೂ ಮೊಬೈಲ್ ಬಿಡುಗಡೆ ಮಹಜರನ್ನು ಕೆ ಎಸ್ ಜಯರಾಮು ಹಾಗೂ ರಾಮಚಂದ್ರ ಅವರ ಸಮಕ್ಷಮ 5 ರಿಂದ 5-20 ಗಂಟೆವರೆಗೆ ಜರುಗಿಸಿದ್ದು ಸದರಿ ಮಹಜರನ್ನು ನಿಪಿ.47 ಎಂದು, ತನ್ನ ಸಹಿಯನ್ನು ನಿಪಿ.47 ಎ ಎಂದು, ಫೋಟೋವನ್ನು ನಿಪಿ.48 ಎಂದು, ದಿಃ05/10/2022 ರಂದು ರೆಡ್ ಮಿ ಯ ಆಕಾಶ ನೀಲಿ ಬಣ್ಣದ ಮೊಬೈಲ್ ಬಿಡುಗಡೆ ಮಹಜರನ್ನು 7-40 ರಿಂದ 8-00 ಗಂಟೆವರೆಗೆ ಸಂಪತ್ ಹಾ೦ಗಾ ಸುಮಂತ್ ಹಾಗೂ ಗಣೇಶ್ ಅವರ ಸಮಕ್ಷಮ ಜರುಗಿಸಿದ್ದು, ಸದರಿ ಮಹಜರನ್ನು ನಿಪಿ.49 ಎಂದು, ತನ್ನ ಸಹಿಯನ್ನು ನಿಪಿ.49 ಎ ಎಂದು,

Visit **ecourts.gov.in** for updates or download mobile app "**eCourts Services**" from Android or iOS

ಫೋಟೋವನ್ನು ನಿಪಿ.50 ಎಂದು, ದಿಃ28/10/2022 ರಂದು ಜಯಪುರ ಪೋಲಿಸ್ ಠಾಣಾ ಆವರಣದಲ್ಲಿ ಪ್ರಕರಣದ ಸ್ಯಾಮ್ ಸಂಗ್ ಕಂಪನಿಯ ಸ್ಮಾರ್ಟ್ ಪೋನಿನ ಮಹಜರನ್ನು 10-00 ರಿಂದ 10-20 ಗಂಟೆವರೆಗೆ ರಾಘವೇಂದ್ರ ಹಾಗೂ ರವಿ ಅವರ ಸಮಕ್ಷಮ ಜರುಗಿಸಿದ್ದು ಸದರಿ ಮಹಜರನ್ನು ನಿಪಿ.51 ಎಂದು, ತನ್ನ ಸಹಿಯನ್ನು ನಿಪಿ.51 ಎ ಎಂದು, ಪೋಟೋವನ್ನು ನಿಪಿ.52 ಎಂದು, ದಿಃ03/01/2023 ರಂದು ಜಯಪುರ ಪೋಲಿಸ್ ಠಾಣಾ ಆವರಣದಲ್ಲಿ ಪ್ರಕರಣದ ಕೆಎ-35 ಎನ್ 3948 ರ ನಂಬರಿನಮಾರುತಿ ಸುಜಕಿ ಸ್ವಿಪ್ಟ ಕಾರನ್ನು ಮಹಜರನ್ನು 7-30 ರಿಂದ 7-50 ಗಂಟೆವರೆಗೆ ಸಂಪತ್ ಹಾಗೂ ಸುಮಂತ್ ಅವರ ಸಮಕ್ಷಮ ಜರುಗಿಸಿದ್ದು ಸದರಿ ಮಹಜರನ್ನು ನಿಪಿ.53 ಎಂದು, ತನ್ನ ಸಹಿಯನ್ನು ನಿಪಿ.53 ಎ ಎಂದು, ಒಂದು ಫೋಟೋ ನಿಪಿ.54 ಎಂದು, ದೃಡೀಕರಣವನ್ನು ನಿಪಿ.55 ಹಾಗೂ ತನ್ನ ಸಹಿಯನ್ನು ನಿಪಿ.55 ಎ ಎಂದು, ಎರಡು ಪೋಟೋಗಳನ್ನು ನಿಪಿ.56 ಮತ್ತು ನಿಪಿ.57 ಎಂದು, ದೃಡೀಕರಣವನ್ನು ನಿಪಿ.58 ಎಂದು, ತನ್ನ ಸಹಿಯನ್ನು ನಿಪಿ.58(ಎ) ಎಂದು, ಪ್ರಥಮವರ್ತಮಾನ ವರದಿಯನ್ನು ನಿಪಿ.59 ಎಂದು, ತನ್ನ ಸಹಿಯನ್ನು ನಿಪಿ.59 ಎ ಎಂದು, ಪಂಚತಂತ್ರವನ್ನು ನಿಪಿ.60 ಎಂದು, ತನ್ನ ಸಹಿಯನ್ನು ನಿಪಿ.60(ಎ) ಎಂದು ಗುರುತಿಸಿ ಸಾಕ್ಷವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿಯು ಮುದ್ದೆ ಮಾಲು 1 ರಿಂದ 3 ಅನ್ನು, ಹಾಗೂ ನ್ಯಾಯಾಲಯದ ಮುಂದಿರುವ 35 ನೇ ಆರೋಪಿಯನ್ನು ನೋಡಿ ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

20. ಚಾಸಾ.15/ಪ್ರಾಸಾ.5 ರವರನ್ನು 35 ನೇ ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದ್ದು ಪ್ರಾಸಾ.5 ರವರು ತಮ್ಮ ಪಾಟೀ ಸವಾಲಿನಲ್ಲಿಃ

Visit **ecourts.gov.in** for updates or download mobile app "**eCourts Services**" from Android or iOS

" ಮುದ್ದೆ ಮಾಲಿನ ಹಣವನ್ನು ನಾನು ಎಣಿಸಿರುವುದಿಲ್ಲ. ವಶಕ್ಕೆ ಪಡೆಯಲಾಯಿತು ಎಂದು ಹೇಳಲಾದ ಹಣದ ಮುಖಬೆಲೆ ನನಗೆ ಗೊತ್ತಿಲ್ಲ ಎಂದರೆ ಸರಿ.

ಅಮಾನತುಪಡಿಸಲಾಯಿತು ಎನ್ನಲಾದ ಹಣವನ್ನು ಮೊದಲೆ ಬಾಕ್ಸಿನಲ್ಲಿ ಹಾಕಿ ಸೀಲ್ ಮಾಡಿ ತರಲಾಗಿತ್ತು. ನನ್ನ ಮುಖ್ಯ ವಿಚಾರಣೆಯಲ್ಲಿ ನುಡಿದಂತೆ ಸದರಿ ಹಣ ಬಾಕ್ಸಿನಲ್ಲಿದ್ದು ನಾನು ಎಣಿಕೆ ಮಾಡದೇ ಇರುವುದರಿಂದ ಇಷ್ಟೇ ಹಣ ಇತ್ತು ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ.

ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡುವ ಪೂರ್ವದಲ್ಲಿ ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ನಾನು ಭೇಟಿ ನೀಡಿರುವುದಿಲ್ಲ.

ಚಾಸಾ 1 ರವರು ನನ್ನ ಮೇಲಾಧಿಕಾರಿ ಎಂದರೆ ಸರಿ. ಇಸ್ಪೀಟ್ ಎಲೆಗಳನ್ನು ನಗದ ಹಣ ಇದ್ದ ಬಾಕ್ಸಿನಲ್ಲಿ ಹಾಕಿ ಮುಚ್ಚಿದ್ದು ಅದನ್ನು ಹಾಜರುಪಡಿಸಿದ್ದರು. ಬಾಕ್ಸಿನಲ್ಲಿ ಸದರಿ ಇಸ್ಪೀಟ್ ಎಲೆಗಳು ಮುಚ್ಚಿದ್ದರಿಂದ ಎಷ್ಟು ಎಲೆಗಳು ಇದ್ದವು ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ಪ್ಲಾಸ್ಟಿಕ್ ಡಬ್ಬಿಯಲ್ಲಿ ಮುದ್ದೆ ಮಾಲುಗಳು ಇದ್ದವು.

ನಿಪಿ.6 ರ ವರದಿಯಲ್ಲಿ ನಾನು ಸ್ವೀಕರಿಸಿದ ಬಗ್ಗೆ ನಮ್ಮ ಇಲಾಖೆಗೆ ಸಂಬಂಧಿಸಿದ ಯಾವುದೇ ಸೀಲು ಇರುವುದಿಲ್ಲ ಎಂದರೆ ಸರಿ.

ಪ್ರ ವ ವರದಿಯನ್ನು ದಾಖಲಿಸಿದ ನಂತರವೂ ನಾನು ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ಬೇಟಿ ನೀಡಿರುವುದಿಲ್ಲ ಎಂದರೆ ಸರಿ.

Visit **ecourts.gov.in** for updates or download mobile app "**eCourts Services**" from Android or iOS

21. ಈ ಮೇಲ್ಕಂಡ ಪಾಟೀ ಸವಾಲಿನ ಅಂಶವನ್ನು ಪರಿಶೀಲಿಸಲಾಗಿ, ಸದರಿ ಸಾಕ್ಷಿಯು ಮುದ್ದೆ ಮಾಲಿನ ಹಣವನ್ನು ತಾನು ಎಣಿಸಿರುವುದಿಲ್ಲವೆಂಬುದಾಗಿ, ವಶಕ್ಕೆ ಪಡೆಯಲಾಯಿತು ಎಂದು ಹೇಳಲಾದ ಹಣದ ಮುಖಬೆಲೆ ತನಗೆ ಗೊತ್ತಿಲ್ಲವೆಂಬುದಾಗಿ ನುಡಿದಿರುತ್ತಾರೆ. ಅಲ್ಲದೇ ಅಮಾನತು ಪಡಿಸಲಾಯಿತು ಎನ್ನಲಾದ ಹಣವನ್ನು ಮೊದಲೇ ಬಾಕ್ಸಿನಲ್ಲಿ ಹಾಕಿ ಸೀಲ್ ಮಾಡಿ ತರಲಾಗಿತ್ತೆಂಬುದಾಗಿ ತನ್ನ ಮುಖ್ಯ ವಿಚಾರಣೆಯಲ್ಲಿ ನುಡಿದಂತೆ ಸದರಿ ಹಣ ಬಾಕ್ಸಿನಲ್ಲಿದ್ದು ತಾನು ಎಣಿಕೆ ಮಾಡದೇ ಇರುವುದರಿಂದ ಇಷ್ಟೇ ಹಣ ಇತ್ತು ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲವೆಂಬುದಾಗಿ ಸ್ಪಷ್ಟವಾಗಿ ನುಡಿದ ಅಂಶವನ್ನು ಪರಿಶೀಲಿಸಲಾಗಿ ಸದರಿ ಮುದ್ದೆ ಮಾಲು-1 ರ ಬಗ್ಗೆ ಸಂಶಯ ವ್ಯಕ್ತವಾಗುತ್ತದೆ. ಸದರಿ ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡುವ ಪೂರ್ವದಲ್ಲಿ ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ತಾನು ಭೇಟಿ ನೀಡಿರುವುದಿಲ್ಲವೆಂಬುದಾಗಿ ಹಾಗೂ ಇಸ್ಪೀಟ್ ಎಲೆಗಳನ್ನು ನಗದ ಹಣ ಇದ್ದ ಬಾಕ್ಸಿನಲ್ಲಿ ಹಾಕಿ ಮುಚ್ಚಿದ್ದು ಅದನ್ನು ಹಾಜರುಪಡಿಸಿದ್ದರು, ಬಾಕ್ಸಿನಲ್ಲಿ ಸದರಿ ಇಸ್ಪೀಟ್ ಎಲೆಗಳು ಮುಚ್ಚಿದ್ದರಿಂದ ಎಷ್ಟು ಎಲೆಗಳು ಇದ್ದವು ಎಂದು ಹೇಳಲಾಗುವುದಿಲ್ಲವೆಂಬುದಾಗಿ ನುಡಿದ ಅಂಶವನ್ನು ಪರಿಶೀಲಿಸಲಾಗಿ ಮುದ್ದೆ ಮಾಲು-2 ರ ಬಗ್ಗೆ ಸಂಶಯ ವ್ಯಕ್ತವಾಗುತ್ತದೆ. ಅಲ್ಲದೇ ಪ್ಲಾಸ್ಟಿಕ್ ಡಬ್ಬಿಯಲ್ಲಿ ಮುದ್ದೆ ಮಾಲುಗಳು ಇದ್ದವೆಂಬುದಾಗಿ ಹಾಗೂ ನಿಪಿ.6 ರ ವರದಿಯಲ್ಲಿ ತಾನು ಸ್ವೀಕರಿಸಿದ ಬಗ್ಗೆ ತಮ್ಮ ಇಲಾಖೆಗೆ ಸಂಬಂಧಿಸಿದ ಯಾವುದೇ ಸೀಲು ಇರುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ ಘಟನೆ ಘಟಿಸಿದ್ದರ ಬಗ್ಗೆಯೇ ಸಂಶಯ ವ್ಯಕ್ತವಾಗುತ್ತದೆ.

Visit **ecourts.gov.in** for updates or download mobile app "**eCourts Services**" from Android or iOS

22. ಅಭಿಯೋಜನೆಯು ಆರೋಪಿತರ ಮೇಲಿನ ಆರೋಪವನ್ನು ಸಾಬೀತುಪಡಿಸುವ ಸಲುವಾಗಿ ಚಾಸಾ-5/ಪ್ರಾಸಾ-6 ಇವರು ಚಾಸಾ.1 ರವರೊಂದಿಗೆ ದಾಳಿಗೆ ಸಹಕರಿಸಿದಂತಹ ಸಾಕ್ಷಿದಾರರನ್ನಾಗಿ ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ:23/09/2022 ರಂದು ತಾನು ಠಾಣೆಯಲ್ಲಿರುವಾಗ ರಾತ್ರಿ 8-35 ಗಂಟೆ ಸಮಯದಲ್ಲಿ ಚಾಸಾ1 ರವರು ತನಗೆ ಫೋನ್ ಮಾಡಿ ಜಯಪುರದಲ್ಲಿರುವ ಡಿಲೈಟ್ ಫುಲ್ ಹೋಮ್ ಸ್ಟೇಯಲ್ಲಿ ಅಕ್ರಮವಾಗಿ ಜೂಜಾಟ ಆಡುತ್ತಿದ್ದಾರೆ ಎಂದು ಮಾಹಿತಿ ತಿಳಿಸಿದ್ದು, ತನಗೆ ಜಯಪುರ ಬಸ್ ನಿಲ್ದಾಣಕ್ಕೆ ಸಿಬ್ಬಂದಿಗಳನ್ನು ಕರೆದುಕೊಂಡು ಬರುವಂತೆ ತಿಳಿಸಿದ್ದು ಅದರಂತೆ ತಾನು ಚಾಸಾ 10 ರವರನ್ನು ಕರೆದುಕೊಂಡು 8-45 ಕ್ಕೆ ಹೋದಾಗ ಅಲ್ಲಿ ಚಾಸಾ 4, ಚಾಸಾ.6 ರಿಂದ ಚಾಸಾ.8 ರವರು ಹಾಜರಿದ್ದು, ನಂತರ ಎ ಎಸ್ ಪಿ., ರವರು ಸ್ಥಳಕ್ಕೆ ಬಂದು ನಡೆದುಕೊಂಡು ಹೋಗುತ್ತಿದ್ದ ಪಂಚಾಯ್ತಿದಾರರಾದ ಚಾಸಾ 2 ಮತ್ತು ಚಾಸಾ.3 ರವರಿಗೆ ದಾಳಿಯ ವಿಚಾರ ತಿಳಿಸಿ, ಪಂಚರಾಗಿ ಸಹಕರಿಸುವಂತೆ ಕೋರಿ ನೋಟಿಸ್ ಜಾರಿ ಮಾಡಿದ್ದು, ನಂತರ ಪಂಚರೊಂದಿಗೆ ಇಲಾಖಾ ವಾಹನ ಹಾಗೂ ಖಾಸಗಿ ವಾಹನಗಳಲ್ಲಿ ಡಿಲೈಟ್ ಫುಲ್ ಹೋಮ್ ಸ್ಟೆ ಬಳಿ ಹೋಗಿದ್ದು, ಅಲ್ಲಿ ಹೊರಗೆ ವಾಹನಗಳು ನಿಂತಿದ್ದು ಅವುಗಳನ್ನು ಗಮನಿಸಿ ಮುಂದೆ ಹೋಗಿದ್ದು, ಡಿಲೈಟ್ ಫುಲ್ ಹೋಮ್ ಸ್ಟೆ ಕೆಳಅಂತಸ್ತಿನಲ್ಲಿ ಕೊಠಡಿಯಲ್ಲಿ ಒಳಗೆ ಹೊರಗೆ ಎಂದು ಇಸ್ಪೀಟ್ ಆಡುತ್ತಿದ್ದನ್ನು ಗಮನಿಸಿ, ಚಾಸಾ.1 ರವರು ತಮ್ಮನ್ನು ಕರೆದುಕೊಂಡು ಅಲ್ಲಿ ಕೊಠಡಿ ಸಂಖ್ಯೆ 1 ಕ್ಕೆ ಹೋದಾಗ 3 ಟೇಬಲ್ ಅನ್ನು ಒಂದಕ್ಕೆ ಒಂದು ಜೋಡಿಸಿಕೊಂಡು, ಬೆಡ್ ಶೀಟ್ ಗಳನ್ನು ಹಾಸಿಕೊಂಡು, ಅದರ ಮೇಲೆ ಇಸ್ಪೀಟ್ ಎಲೆ ಆಡುತ್ತಿದ್ದು, ಹಣವನ್ನು

ಇಟ್ಟು ಜೂಜಾಟ ಆಡುತ್ತಿದ್ದುದು ಕಂಡುಬಂತೆಂತಲೂ, ಇಸ್ಪೀಟ್ ಹಿಡಿದಿದ್ದವರ ಹೆಸರು ಕೇಳಿದಾಗ ರಾಜು ಬಿನ್ ತಮ್ಮಯ್ಯ ಎಂದಿದ್ದು ಸದರಿ ಜೂಜಾಟ ಆಡಲು ಸರಕಾರದಿಂದ ಯಾವುದೇ ಪರವಾನಿಗೆ ಇರುವುದಿಲ್ಲ ಎಂದಿರುತ್ತಾರೆಂತಲೂ, ಉಳಿದವರ ಹೆಸರು ಕೇಳಲಾಗಿ ರಾಜಶೇಖರ, ಶ್ರೀಧರ, ಶ್ರೀನಾಥ, ರವಿಕುಮಾರ, ನಾಗರಾಜ, ಸಂದೀಪ, ಬಿಪಿನ್, ತೇಜಸ್ ಹಾಗೂ ಇತರರು ಒಟ್ಟಾರೆ 35 ಜನ ಇದ್ದರೆಂತಲೂ, ಟೇಬಲ್ ಮೇಲಿದ್ದ ಹಣವನ್ನು ಎಣಿಸಿದಾಗ ರೂ.5,54,140/- ಗಳು ಇದ್ದುದು ಕಂಡುಬಂದಿತೆಂತಲೂ, ಹಾಗೂ ಚೇರುಗಳನ್ನು ಎಣಿಸಲಾಗಿ ಒಟ್ಟು 34 ಚೇರುಗಳು ಇದ್ದು, ಆಟಕ್ಕೆ ಪಣವಾಗಿ ಇಟ್ಟಿದ್ದ 39 ಮೊಬೈಲ್ ಇರುವುದು ಕಂಡು ಬಂತೆಂತಲೂ, ಟೇಬಲ್ ಮೇಲೆ ಒಂದು ಬಾಕ್ಸ್ ಇದ್ದು, ಅದನ್ನು ವಶಕ್ಕೆ ಪಡೆಯಲಾಯಿತೆಂತಲೂ, ಆಟಕ್ಕೆ ಬಳಸಿದ 3 ಟೇಬಲ್ ಹಾಗೂ ಹಾಸಿದ್ದ ಬೆಡ್ ಶೀಟ್ ಗಳನ್ನು ವಶಕ್ಕೆ ಪಡೆಯಲಾಯಿತೆಂತಲೂ, ಆಟಕ್ಕೆ ಪಣವಾಗಿಟ್ಟಿದ್ದ 4 ಕಾರುಗಳನ್ನು ವಶಕ್ಕೆ ಪಡೆಯಲಾಯಿತೆಂತಲೂ, ಸದರಿ ಹಣವನ್ನು ಅಲ್ಲೇ ಇದ್ದ ಪ್ಲಾಸ್ಟಿಕ್ ಬಾಕ್ಸಿನಲ್ಲಿ ಹಾಕಿ ಬಿಳಿಬಟ್ಟೆಯಲ್ಲಿ ಸುತ್ತಿ ಚಾಸಾ 1 ಹಾಗೂ ಚಾಸಾ.3 ರವರ ಸಹಿ ಮಾಡಿದ ಚೀಟಿ ಅಂಟಿಸಲಾಯಿತೆಂತಲೂ, ಸದರಿ ಮಹಜರನ್ನು ರಾತ್ರಿ 9-30 ರಿಂದ 11-30 ಗಂಟೆವರೆಗೆ ಬರೆದು ಸದರಿ ಸ್ಥಳದ ಫೋಟೊ ತೆಗೆದಿರುತ್ತಾರೆಂತಲೂ, ಸದರಿ ಮಹಜರಿಗೆ ತಾನು ಸಹಿ ಮಾಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿಯು ನಿಪಿ.1 ರಲ್ಲಿರುವ ತನ್ನ ಸಹಿಯನ್ನು ನಿಪಿ.1(ಇ) ಎಂದು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ನಿಪಿ.3 ಮತ್ತು ನಿಪಿ.4 ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ತಾನು ಮೇಲಾಧಿಕಾರಿಗಳ ಮುಂದೆ ತನ್ನ ಹೇಳಿಕೆ ನೀಡಿರುತ್ತೇನೆಂದು ನುಡಿದಿರುತ್ತಾರೆ. ಸದರಿ ಸಾಕ್ಷಿಯು ನ್ಯಾಯಾಲಯದ ಮುಂದಿರುವ

Visit **ecourts.gov.in** for updates or download mobile app "**eCourts Services**" from Android or iOS

1, 16, 24, 29, 32, 33 ನೇ ಆರೋಪಿತರನ್ನು ಹಾಗೂ ಮುದ್ದೆ ಮಾಲು 1 ರಿಂದ 3 ಅನ್ನು ನೋಡಿ ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

23. ಚಾಸಾ.5/ಪ್ರಾಸಾ.6 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ:

> **"ಚಾಸಾ 1 ರವರು ನಮ್ಮನ್ನು ಜಯಪುರ ಬಸ್ ನಿಲ್ದಾಣಕ್ಕೆ ಬರುವಂತೆ ಸೂಚಿಸಿದ್ದರು. ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ಬರುವಂತೆ ಸೂಚಿಸಿರುತ್ತಾರೆ. ಜಯಪುರ ಬಸ್ ನಿಲ್ದಾಣವು ನಮ್ಮ ಠಾಣೆಯಿಂದ ಅರ್ಧ ಕಿಮಿ ಅಂತರದಲ್ಲಿರುತ್ತದೆ. ಚಾಸಾ 4 ರವರು ನಾವು ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ಹೋಗುವ ಪೂರ್ವದಲ್ಲೆ ಬಂದಿದ್ದರು.**
>
> **ಪಂಚರುಗಳನ್ನು ಚಾಸಾ 1 ರವರೇ ಕರಸಿರುತ್ತಾರೆ. ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ನಾವು ಖಾಸಗಿ ವಾಹನದಲ್ಲಿ ಹೋಗಿದ್ದು ಚಾಸಾ 1 ಹಾಗೂ 4 ರವರು ಸರ್ಕಾರಿ ವಾಹನದಲ್ಲಿ ಹೋಗಿದ್ದರು. ಸದರಿ ಖಾಸಗಿ ವಾಹನ ಯಾರದ್ದು ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ.**
>
> **ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ನಾವು ಹೋದಾಗ ಸದರಿ ಡಿಲೈಟ್ ಫುಲ್ ಹೋಮ್ ಸ್ಟೇ ಹೊರಗೆ 4 ವಾಹನಗಳು ನಿಂತಿದ್ದವು. ಡಿಲೈಟ್ ಫುಲ್ ಹೋಮ್ ಸ್ಟೇ ಒಳಗೆ ನಾವು ಹೋದಾಗ ಆರೋಪಿತರು ಓಡಿಹೋಗಲು ಪ್ರಯತ್ನಿಸಿರುತ್ತಾರೆ, ಸದರಿ ಕೊಠಡಿಗೆ ಒಂದೆ ಬಾಗಿಲು ಇದ್ದಿದ್ದರಿಂದ ಅವರು ಓಡಿಹೋಗಲು ಸಾಧ್ಯವಾಗಿರುವುದಿಲ್ಲ.**

Visit **ecourts.gov.in** for updates or download mobile app "**eCourts Services**" from Android or iOS

ಪ್ರಕರಣದ ಒಟ್ಟು 35 ಜನ ಆರೋಪಿತರ ಹೆಸರು ಹಾಗೂ ವಿಳಾಸಗಳನ್ನು ನನಗೆ ಹೇಳಲಾಗುವುದಿಲ್ಲ ಎಂದರೆ ಮರೆತು ಹೋಗಿದೆ ಎನ್ನುತ್ತಾರೆ. ಸದರಿ 35 ಆರೋಪಿತರ ಮುಖವನ್ನು ಗುರುತಿಸಲು ನನಗೆ ಸಾಧ್ಯವಾಗಿರುತ್ತದೆಯೇ ಎಂದರೆ 3 ವರ್ಷವಾಗಿರುವುದರಿಂದ ಮರೆತುಹೋಗಿರುತ್ತದೆ ಎನ್ನುತ್ತಾರೆ.

ರೂ.5,54,140/- ಹಣವನ್ನು ನಾನು ಎಣಿಸಿರುವುದಿಲ್ಲ, ಯಾರು ಎಣಿಸಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ.

ಇಸ್ಪೀಟ್ ಎಲೆಗಳನ್ನು ಯಾರು ಎಣಿಕೆ ಮಾಡಿದ್ದರು ಎಂದು ನನಗೆ ನೆನಪಿರುವುದಿಲ್ಲ.

ನಿಪಿ.1 ರ ಮಹಜರಿನಲ್ಲಿ ಸದರಿ ನೋಟುಗಳ ಸಂಖ್ಯೆಯನ್ನು ನಮೂದು ಮಾಡಿರುವುದಿಲ್ಲ. ಕೊಠಡಿ ಸಂಖ್ಯೆ ಒಂದು ಎಂಬುದಕ್ಕೆ ಸಂಬಂಧಿಸಿ ಸದರಿ ಕೊಠಡಿಯ ಮುಂದೆ ಸಂಖ್ಯಾಫಲಕ ಇರುತ್ತದೆಯೆ ಎಂದರೆ ನೆನಪಿರುವುದಿಲ್ಲ.

ಅಮಾನತುಪಡಿಸಿಕೊಳ್ಳಲಾಯಿತು ಎನ್ನಲಾದ ವಾಹನಗಳು ಯಾರದ್ದು ಎಂದು ಗೊತ್ತಿರುವುದಿಲ್ಲ ಎಂದರೆ ನನಗೆ ನೆನಪಿರುವುದಿಲ್ಲ ಎನ್ನುತ್ತಾರೆ.

39 ಮೊಬೈಲ್ ಗಳು ಯಾರು ಯಾರಿಗೆ ಸೇರಿದ್ದು ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ನನಗೆ ಈಗ ನೆನಪಿರುವುದಿಲ್ಲ.

ಯಾವ ಇಲಾಖಾ ಮೊಹರನ್ನು ಹಾಕಲಾಗಿತ್ತು ಎಂದರೆ ನನಗೆ ನೆನಪಿರುವುದಿಲ್ಲ. ನಿಪಿ.1 ಮಹಜರನ್ನು ಚಾಸಾ 10 ರವರು ಬರೆದಿರುತ್ತಾರೆ. "

Visit **ecourts.gov.in** for updates or download mobile app "**eCourts Services**" from Android or iOS

24. ಈ ಮೇಲಿನ ಪಾಟೀ ಸವಾಲಿನ ಅಂಶಗಳನ್ನು ಪರಿಶೀಲಿಸಲಾಗಿ ಸದರಿ ಸಾಕ್ಷಿಯು ಚಾಸಾ.1 ರವರು ತಮ್ಮನ್ನು ಜಯಪುರ ಬಸ್ ನಿಲ್ದಾಣಕ್ಕೆ ಬರುವಂತೆ ಸೂಚಿಸಿದ್ದರೆಂಬುದಾಗಿ ಹಾಗೂ ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ಬರುವಂತೆ ಸೂಚಿಸಿರುತ್ತಾರೆಂಬುದಾಗಿ ನುಡಿದಿರುತ್ತಾರೆ. ಅಲ್ಲದೇ ಜಯಪುರ ಬಸ್ ನಿಲ್ದಾಣವು ಠಾಣೆಯಿಂದ ಅರ್ಧ ಕಿ.ಮಿ. ಅಂತರದಲ್ಲಿರುತ್ತದೆ, ಚಾಸಾ 4 ರವರು ತಾವು ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ಹೋಗುವ ಪೂರ್ವದಲ್ಲೆ ಬಂದಿದ್ದರು ಹಾಗೂ ಪಂಚರುಗಳನ್ನು ಚಾಸಾ 1 ರವರೇ ಕರಸಿರುತ್ತಾರೆಂಬುದಾಗಿ ನುಡಿದಿರುತ್ತಾರೆ. ಅಲ್ಲದೇ ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ತಾವು ಖಾಸಗಿ ವಾಹನದಲ್ಲಿ ಹೋಗಿದ್ದು, ಚಾಸಾ.1 ಹಾಗೂ ಚಾಸಾ.4 ರವರು ಸರ್ಕಾರಿ ವಾಹನದಲ್ಲಿ ಹೋಗಿದ್ದರು, ಸದರಿ ಖಾಸಗಿ ವಾಹನ ಯಾರದ್ದು ಎಂದು ತನಗೆ ನಿಖರವಾಗಿ ಹೇಳಲಾಗುವುದಿಲ್ಲ ಎಂಬುದಾಗಿ ಸ್ಪಷ್ಟವಾಗಿ ಒಪ್ಪಿರುತ್ತಾರೆ. ಅಲ್ಲದೇ ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ತಾವು ಹೋದಾಗ ಸದರಿ ಡಿಲೈಟ್ ಫುಲ್ ಹೋಮ್ ಸ್ಟೇ ಹೊರಗೆ 4 ವಾಹನಗಳು ನಿಂತಿದ್ದವೆಂಬುದಾಗಿ, ಡಿಲೈಟ್ ಫುಲ್ ಹೋಮ್ ಸ್ಟೇ ಒಳಗೆ ತಾವು ಹೋದಾಗ ಆರೋಪಿತರು ಓಡಿಹೋಗಲು ಪ್ರಯತ್ನಿಸಿರುತ್ತಾರೆ, ಸದರಿ ಕೊಠಡಿಗೆ ಒಂದೆ ಬಾಗಿಲು ಇದ್ದಿದ್ದರಿಂದ ಅವರು ಓಡಿಹೋಗಲು ಸಾಧ್ಯವಾಗಿರುವುದಿಲ್ಲವೆಂಬುದಾಗಿ ನುಡಿದಿರುತ್ತಾರೆ. ಸದರಿ ಅಂಶದಿಂದ ಚಾಸಾ.1 ರವರ ಪಾಟೀ ಸವಾಲಿನಲ್ಲಿ ನುಡಿದ ಅಂಶಕ್ಕೂ, ಸದರಿ ಸಾಕ್ಷಿಯು ನುಡಿದ ಅಂಶಕ್ಕೂ ಒಂದಕ್ಕೊಂದು ಸಾಮ್ಯತೆ ಇಲ್ಲದೇ ಇರುವುದು ಕಂಡು ಬರುತ್ತದೆ. ಅಲ್ಲದೇ ಪ್ರಕರಣದ ಒಟ್ಟು 35 ಜನ ಆರೋಪಿತರ ಹೆಸರು ಹಾಗುೂ ವಿಳಾಸಗಳನ್ನು ತನಗೆ ಹೇಳಲಾಗುವುದಿಲ್ಲ ಎಂದರೆ ಮರೆತು

Visit **ecourts.gov.in** for updates or download mobile app "**eCourts Services**" from Android or iOS

ಹೋಗಿದೆ ಎನ್ನುತ್ತಾರೆಂಬುದಾಗಿ ನುಡಿದಿರುತ್ತಾರೆ. ಸದರಿ 35 ಆರೋಪಿತರ ಮುಖವನ್ನು ಗುರುತಿಸಲು ತನಗೆ ಸಾಧ್ಯವಾಗಿರುತ್ತದೆಯೇ ಎಂದರೆ 3 ವರ್ಷವಾಗಿರುವುದರಿಂದ ಮರೆತುಹೋಗಿರುತ್ತದೆ ಎನ್ನುತ್ತಾರೆಂಬುದಾಗಿ ನುಡಿದಿರುತ್ತಾರೆ. ಅಲ್ಲದೇ ರೂ.5,54,140/- ಹಣವನ್ನು ತಾನು ಎಣಿಸಿರುವುದಿಲ್ಲ, ಯಾರು ಎಣಿಸಿರುತ್ತಾರೆ ಎಂದು ತನಗೆ ನೆನಪಿಲ್ಲವೆಂಬುದಾಗಿ ನುಡಿದ ಅಂಶವನ್ನು ಪರಿಶೀಲಿಸಲಾಗಿ ಮುದ್ದೆ ಮಾಲು-1 ರ ಬಗ್ಗೆಯೇ ಸಂಶಯ ವ್ಯಕ್ತವಾಗುತ್ತದೆ. ಅಲ್ಲದೇ ಇಸ್ಪೀಟ್ ಎಲೆಗಳನ್ನು ಯಾರು ಎಣಿಕೆ ಮಾಡಿದ್ದರು ಎಂದು ತನಗೆ ನೆನಪಿರುವುದಿಲ್ಲವೆಂಬುದಾಗಿ ನುಡಿದ ಅಂಶವನ್ನು ಪರಿಶೀಲಿಸಲಾಗಿ ಮುದ್ದೆ ಮಾಲು-2 ರ ಬಗ್ಗೆ ಸಂಶಯ ವ್ಯಕ್ತವಾಗುತ್ತದೆ. ಅಲ್ಲದೇ ನಿಪಿ.1 ರ ಮಹಜರಿನಲ್ಲಿ ಸದರಿ ನೋಟುಗಳ ಸಂಖ್ಯೆಯನ್ನು ನಮೂದು ಮಾಡಿರುವುದಿಲ್ಲವೆಂಬುದಾಗಿ, ಅಮಾನತುಪಡಿಸಿಕೊಳ್ಳಲಾಯಿತು ಎನ್ನಲಾದ ವಾಹನಗಳು ಯಾರದ್ದು ಎಂದು ಗೊತ್ತಿರುವುದಿಲ್ಲ ಎಂದರೆ ತನಗೆ ನೆನಪಿಲ್ಲವೆಂಬುದಾಗಿ ಹಾಗೂ 39 ಮೊಬೈಲ್ ಗಳು ಯಾರು ಯಾರಿಗೆ ಸೇರಿದ್ದು ಎಂದು ತನಗೆ ಹೇಳಲಾಗುವುದಿಲ್ಲ ಎಂದರೆ ತನಗೆ ಈಗ ನೆನಪಿರುವುದಿಲ್ಲವೆಂಬುದಾಗಿ, ಯಾವ ಇಲಾಖಾ ಮೊಹರನ್ನು ಹಾಕಲಾಗಿತ್ತು ಎಂದರೆ ತನಗೆ ನೆನಪಿರುವುದಿಲ್ಲವೆಂಬುದಾಗಿ ನುಡಿದ ಅಂಶವನ್ನು ಪರಿಶೀಲಿಸಲಾಗಿ ಕೃತ್ಯದ ಬಗ್ಗೆಯೇ ಸಂಶಯ ವ್ಯಕ್ತವಾಗುತ್ತದೆ.

25. ಮೇಲ್ಕಂಡ ಸಾಕ್ಷಿದಾರರ ಸಾಕ್ಷ್ಯ ಹಾಗೂ ದಾಖಲೆಗಳನ್ನು ಸಂಪೂರ್ಣವಾಗಿ ಪರಿಗಣಿಸಿದಾಗ ನ್ಯಾಯಾಲಯಕ್ಕೆ ತಿಳಿದುಬರುವುದೇನೆಂದರೆ ದಿನಾಂಕ 23.09.2022 ರಂದು ರಾತ್ರಿ 9.10 ಗಂಟೆ ಸಮಯದಲ್ಲಿ ಜಯಪುರ ಪೊಲೀಸ್

ಠಾಣಾ ವ್ಯಾಪ್ತಿಯ ಜಯಪುರ ಪಟ್ಟಣದ ನಂದಿನಿ ಲೇಔಟ್‌ನಲ್ಲಿರುವ ಡಿಲೈಟ್ ಫುಲ್ ಹೋಮ್ ಸ್ಟೇನ ಕೆಳಅಂತಸ್ತಿನ 1 ನೇ ರೂಮಿನಲ್ಲಿ 1, 3 ರಿಂದ 5, 9 ರಿಂದ 14, 17 ರಿಂದ 19, 21 ರಿಂದ 24, 29 ರಿಂದ 32, 34 ಮತ್ತು 35 ನೇ ಆರೋಪಿತರು 2, 8, 15, 16, 20, 25 ರಿಂದ 28 ನೇ ಆರೋಪಿತರೊಂದಿಗೆ ಸೇರಿಕೊಂಡು ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಹಣವನ್ನು, ಮೊಬೈಲ್ ಗಳನ್ನು ಹಾಗೂ ಕಾರುಗಳನ್ನು ಪಣವಾಗಿಟ್ಟುಕೊಂಡು 52 ಇಸ್ಪೀಟ್ ಎಲೆಗಳ ಸಹಾಯದಿಂದ ಅದೃಷ್ಟದ ಇಸ್ಪೀಟ್ ಜೂಜಾಟವನ್ನು ಆಡುತ್ತಿದ್ದ ಬಗ್ಗೆ ಮಾಹಿತಿ ಬಂದ ಮೇರೆಗೆ ಚಾಸಾ.1 ರವರು ಚಾಸಾ.2 ರಿಂದ ಚಾಸಾ.11 ರವರೊಂದಿಗೆ ದಾಳಿ ಮಾಡಿ ಆರೋಪಿತರ ವಶದಿಂದ ಇಸ್ಪೀಟು ಜೂಜಾಟಕ್ಕೆ ಬಳಸಿದ 52 ಇಸ್ಪೀಟು ಎಲೆಗಳು, 5,54,140/- ರೂ. ನಗದು ಹಣ, ಒಟ್ಟು 39 ಮೊಬೈಲ್ ಫೋನ್ ಗಳು, ನಾಲ್ಕು ಕಾರುಗಳು, ಒಂದು ಮರದ ಪೈಬರ್ ಬಾಕ್ಸ್, ಮೂರು ಮರದ ಟೇಬಲ್ ಗಳು, ಎರಡು ಬ್ಲಾಂಕೆಟ್ ಮತ್ತು ಒಂದು ಬೆಡ್ ಶೀಟ್, 34 ಪೈಬರ್ ಚೇರ್ ಗಳನ್ನು ವಶಪಡಿಸಿಕೊಂಡು, ಠಾಣೆಗೆ ಬಂದು ಪ್ರಕರಣವನ್ನು ದಾಖಲಿಸಿದವರಾಗಿರುತ್ತಾರೆ. ಈ ಎಲ್ಲಾ ಚಟುವಟಿಕೆಗಳನ್ನು ಚಾಸಾ.2 ಮತ್ತು ಚಾಸಾ-3 ಅಂದರೆ ಮಹಜರ್ ಸಾಕ್ಷಿದಾರರೆಂದು ಹೇಳಲಾದ ಸತೀಶ್ ಹೆಚ್.ಎಂ. ಮತ್ತು ಫಣಿರಾಜರವರ ಸಮಕ್ಷಮ ಜರುಗಿಸಲಾಯಿತು ಎಂಬುದು ಅಭಿಯೋಜನೆ ಪ್ರಕರಣವಾಗಿದ್ದು, ಆದರೆ ಚಾಸಾ-2 ಮತ್ತು ಚಾಸಾ-3 ರವರು ನಿಪಿ-1 ಎಂದು ಗುರುತಿಸಲಾದ ಪಂಚನಾಮೆಯಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿಕೊಂಡಿದ್ದನ್ನು ಬಿಟ್ಟರೆ, ಪಂಚನಾಮೆಗೆ ಅನುಗುಣವಾಗಿ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಸದರಿಯವರ ಪ್ರಕಾರ ಚಾಸಾ-1, ಚಾಸಾ-4 ರಿಂದ ಚಾಸಾ.11 ರವರು ಆರೋಪಿತರನ್ನು ಹಿಡಿದು, ಅವರಿಂದ ಸ್ಥಳದಲ್ಲಿ ವಸ್ತುಗಳನ್ನು

ವಶಪಡಿಸಿಕೊಂಡ ಸಮಯದಲ್ಲಿ ಇತರೆ ಎಲ್ಲಾ ಸಮಯದಲ್ಲೂ ಚಾಸಾ-2 ಮತ್ತು ಚಾಸಾ-3 ರವರು ಸ್ಥಳದಲ್ಲಿ ಇದ್ದರು ಹಾಗೂ ಎಲ್ಲಾ ವಿಷಯವನ್ನು ತಿಳಿದುಕೊಂಡು ಮಹಜರಿಗೆ ಸಹಿ ಮಾಡಿ, ಹೇಳಿಕೆ ಕೊಟ್ಟಿದ್ದಾರೆ ಎಂದಾಗಿರುತ್ತದೆ. ಆದರೆ ಈ ಸಂಬಂಧ ಚಾಸಾ-2 ಮತ್ತು ಚಾಸಾ-3 ರವರಿಂದ ಯಾವುದೇ ಪೂರಕ ಸಾಕ್ಷ್ಯ ಹೊರಬಂದಿರುವುದಿಲ್ಲ. ಅದಲ್ಲದೇ ಸದರಿಯವರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಚಾಸಾ-2 ಮತ್ತು ಚಾಸಾ-3 ರವರು ಘಟನೆಗೆ ಸಂಬಂಧಿಸಿದಂತೆ ತಾವು ಯಾವುದೇ ಹೇಳಿಕೆ ನೀಡಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಅಭಿಯೋಜನೆ ಸದರಿಯವನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದಾಗ್ಯೂ ಅಭಿಯೋಜನೆಗೆ ಪೂರಕವಾದ ಯಾವುದೇ ಸಾಕ್ಷ್ಯವನ್ನು ಇವರು ನುಡಿದಿರುವುದಿಲ್ಲ. ಇವರ ಸಾಕ್ಷ್ಯಕ್ಕೂ ಚಾಸಾ-1 ಮತ್ತು ಚಾಸಾ.4 ರವರ ಸಾಕ್ಷ್ಯಕ್ಕೂ ಒಂದಕ್ಕೊಂದು ಸಾಮ್ಯತೆ ಕಂಡು ಬಂದಿರುವುದಿಲ್ಲ. ಸದರಿ ಪೋಲೀಸ್ ಅಧಿಕಾರಿಗಳಿಗೆ ತದ್ವಿರುದ್ಧವಾದ ಸಾಕ್ಷ್ಯವನ್ನು ಸ್ವತಂತ್ರ ಸಾಕ್ಷಿದಾರರಾದ ಚಾಸಾ-2 ಮತ್ತು ಚಾಸಾ-3 ರವರು ನುಡಿದಿರುತ್ತಾರೆ.

26. ಒಟ್ಟಿನಲ್ಲಿ ಈ ಪ್ರಕರಣದಲ್ಲಿ ಚಾಸಾ-1 ಮತ್ತು ಚಾಸಾ-4 ರವರಿಗೆ ಪೂರಕವಾದ ಸಾಕ್ಷ್ಯ ಅಂದರೆ, ಆರೋಪಿತರನ್ನು ಮಾಲು ಸಮೇತ ಸ್ಥಳದಲ್ಲಿ ಹಿಡಿದ ಬಗ್ಗೆ, ಆ ಸಮಯದಲ್ಲಿ ಅವರ ಬಳಿ ಹಣ ಇದ್ದು, ಆರೋಪಿತರು ಸದರಿ ಹಣವನ್ನು ಹಣವನ್ನು, ಮೊಬೈಲ್ ಗಳನ್ನು ಹಾಗೂ ಕಾರುಗಳನ್ನು ಪಣವಾಗಿಟ್ಟುಕೊಂಡು ಆಟವಾದ ಅಂದರ್-ಬಾಹರ್ ಆಡುತ್ತಿದ್ದರು ಎಂಬ ಬಗ್ಗೆ ಚಾಸಾ-1, ಚಾಸಾ-4 ಅಂದರೆ ಪೋಲೀಸ್ ಅಧಿಕಾರಿಗಳ ಸಾಕ್ಷ್ಯವನ್ನು ಹೊರತುಪಡಿಸಿ ಬೇರೆ ಯಾವ

ಸಾಕ್ಷಿದಾರರ ಸಾಕ್ಷ್ಯ ಲಭ್ಯ ಇರುವುದಿಲ್ಲ. ಅಲ್ಲದೇ ಚಾಸಾ-15 ಮತ್ತು ಚಾಸಾ.5 ರವರು ತನಿಖಾಧಿಕಾರಿಯಾಗಿದ್ದು ಸಹಜವಾಗಿ ಸಾಕ್ಷ್ಯವನ್ನು ನುಡಿಯುವಂತಹ ಹಿತಾಸಕ್ತಿವುಳ್ಳರಾಗಿರುತ್ತಾರೆ. ಆ ಕಾರಣದಿಂದ ಕೇವಲ ಚಾಸಾ-1, ಚಾಸಾ-4, ಚಾಸಾ-15 ಮತ್ತು ಚಾಸಾ-5 ಅಂದರೆ ಪೋಲೀಸ್ ಅಧಿಕಾರಿಗಳ ಸಾಕ್ಷ್ಯವನ್ನು ಹೊರತುಪಡಿಸಿ ಆರೋಪಿತರ ಮೇಲಿನ ಆರೋಪವನ್ನು ಸಾಬೀತು ಪಡಿಸಲು ಯಾವುದೇ ಸ್ವತಂತ್ರ್ಯ ಸಾಕ್ಷಿದಾರರ ಸಾಕ್ಷ್ಯವಿಲ್ಲದೆ ಆರೋಪಿತರನ್ನು ಶಿಕ್ಷಿಸಲು ಬರುವುದಿಲ್ಲ. ಬಹು ಮುಖ್ಯವಾಗಿ ಆರೋಪಿತರನ್ನು ಆ ಸಮಯದಲ್ಲಿ ಹಿಡಿದ ಬಗ್ಗೆ ಹಾಗೂ ಅವರಿಂದ ವಸ್ತುಗಳನ್ನು ವಶಪಡಿಸಿಕೊಂಡ ಬಗ್ಗೆ ಅಂಶಗಳು ರುಜುವಾತಾಗಬೇಕಾಗುತ್ತದೆ. ಈ ಎಲ್ಲಾ ಅಂಶಗಳು ಆರೋಪಿತರ ಕೃತ್ಯದ ಬಗ್ಗೆ ಸಂಶಯವನ್ನು ಮೂಡಿಸುತ್ತದೆ. ಆದ ಕಾರಣ ಆರೋಪಿತರಿಗೆ ಸಂಶಯದ ಲಾಭವನ್ನು ನೀಡುತ್ತಾ **ಅಂಶ-1 ಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿರುತ್ತದೆ.**

27. **ಅಂಶ ನಂಃ 2**– ಈ ಮೇಲೆ ಹೇಳಿದ ವಿವರಣೆಯಂತೆ ಮತ್ತು ಸಾಕ್ಷಿದಾರರ ಹೇಳಿಕೆ ಹಾಗೂ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಅಭಿಯೋಜನೆ ಪಕ್ಷವು ಆರೋಪಿತರು ಕೃತ್ಯವನ್ನು ಎಸಗಿರುವ ಬಗ್ಗೆ ಅಭಿಯೋಜನೆಯು ವಿಫಲವಾಗಿರುತ್ತದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡಂತೆ ಆದೇಶಿಸಲಾಗಿರುತ್ತದೆ.

Visit **ecourts.gov.in** for updates or download mobile app "**eCourts Services**" from Android or iOS

**<u>ಆದೇಶ</u>**

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ 1, 3 ರಿಂದ 5, 7, 9 ರಿಂದ 14, 17 ರಿಂದ 19, 21 ರಿಂದ 24, 29 ರಿಂದ 32, 34 ಮತ್ತು 35 ನೇ ಆರೋಪಿತರನ್ನು ಕಲಂ 80 ಕರ್ನಾಟಕ ಪೊಲೀಸ್ ಕಾಯ್ದೆ ಅಡಿಯಲ್ಲಿನ ಆರೋಪದಿಂದ ನಿರ್ದೋಷಿಗಳು ಎಂದು ದೋಷ ಮುಕ್ತಗೊಳಿಸಲಾಯಿತು.

1, 3 ರಿಂದ 5, 7, 9 ರಿಂದ 14, 17 ರಿಂದ 19, 21 ರಿಂದ 24, 29 ರಿಂದ 32, 34 ಮತ್ತು 35 ನೇ ಆರೋಪಿತರು ಹಾಗೂ ಜಾಮೀನುದಾರರು ನ್ಯಾಯಾಲಯದಲ್ಲಿ ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಲಾಗಿದೆ.

2, 6, 8, 15, 16, 20, 25 ರಿಂದ 28, 33 ನೇ ಆರೋಪಿತರ ವಿರುದ್ಧ ಪ್ರಕರಣವನ್ನು ಸಿ.ಸಿ.ನಂಬರ್ 1003/2025 ರಲ್ಲಿ ಪ್ರತ್ಯೇಕಿಸಲಾಗಿದೆ.

ತೀರ್ಪಿನ ಮತ್ತೊಂದು ಪ್ರತಿಯನ್ನು ಪ್ರತ್ಯೇಕ ಪ್ರಕರಣ ಸಂಖ್ಯೆ ಸಿ.ಸಿ.ನಂ.1003/2025 ರಲ್ಲಿ ಇಡಲು ಆದೇಶಿಸಲಾಗಿದೆ.

(ತೀರ್ಪನ್ನು ಉಕ್ತಲೇಖನದ ಮೇರೆಗೆ ಗಣಕಯಂತ್ರದ ಮೇಲೆ ನೇರವಾಗಿ ಶೀಘ್ರಲಿಪಿಗಾರರಿಂದ ಗಣಕೀಕರಿಸಿ ನಂತರ ಓದಿ, ತಿದ್ದಿ, ನಂತರ ತೆರೆದ ನ್ಯಾಯಾಲಯದಲ್ಲಿ ದಿನಾಂಕ 25 ನೇ ಮಾರ್ಚ್ 2026 ರಂದು ಪ್ರಕಟಿಸಲಾಯಿತು).

ಸಹಿ/-25.03.2026
**(ಶ್ರೀಮತಿ ನಂದಿನಿ.ಎಂ.ಎನ್)**
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕೊಪ್ಪ

Visit **ecourts.gov.in** for updates or download mobile app "**eCourts Services**" from Android or iOS

**----- ಅನುಬಂಧ -----**

**ಅಭಿಯೋಜನೆಯವರ ಪರವಾಗಿ ವಿಚಾರಣೆಯಾದ  ಸಾಕ್ಷಿದಾರರ ಪಟ್ಟಿ:**

ಪಿಡಬ್ಲ್ಯು 1 ಗುಂಜನ್ ಆರ್ಯ

ಪಿಡಬ್ಲ್ಯು 2 ಸತೀಶ್ ಹೆಚ್ ಎಂ.

ಪಿಡಬ್ಲ್ಯು 3 ಫಣಿರಾಜ್

ಪಿಡಬ್ಲ್ಯು 4 ಮೂರ್ತಪ್ಪ

ಪಿಡಬ್ಲ್ಯು 5 ಶಿವರುದ್ರಪ್ಪ

ಪಿಡಬ್ಲ್ಯು 6 ಜ್ಯೋತಿ ಎನ್ ಎ.

**ಅಭಿಯೋಜನೆಯವರ ಪರವಾಗಿ ಗುರ್ತಿಸಿದ ದಾಖಲೆಗಳ ಪಟ್ಟಿ:**

| | |
|---|---|
| ನಿಶಾನೆ ಪಿ-1 | ಸ್ಥಳ ಮಹಜರ್ |
| ನಿಶಾನೆ ಪಿ-1(ಎ ಯಿಂದ ಡಿ ) | ಸಹಿಗಳು |
| ನಿಶಾನೆ ಪಿ-2 | ಪಂಚರಿಗೆ ನೀಡಿದ ನೋಟೀಸು |
| ನಿಶಾನೆ ಪಿ-2(ಎ, ಬಿ) | ಸಹಿಗಳು |
| ನಿಶಾನೆ ಪಿ-3 ಮತ್ತು 4 | ಫೋಟೋಗಳು |
| ನಿಶಾನೆ ಪಿ-5 | ಸಿ.ಡಿ. |
| ನಿಶಾನೆ ಪಿ-6 | ವರದಿ |
| ನಿಶಾನೆ ಪಿ-6(ಎ) | ಸಹಿ |
| ನಿಶಾನೆ ಪಿ-7 | ಪ್ರಾಸಾ.1 ರವರ ಹೇಳಿಕೆ |
| ನಿಶಾನೆ ಪಿ-8 | ಪ್ರಾಸಾ.2 ರವರ ಹೇಳಿಕೆ |
| ನಿಶಾನೆ ಪಿ-9 | ಬಿಡುಗಡೆ ಮಹಜರ್ |
| ನಿಶಾನೆ ಪಿ-9(ಎ) | ಸಹಿ |
| ನಿಶಾನೆ ಪಿ-10 ಮತ್ತು 11 | ಫೋಟೋಗಳು |
| ನಿಶಾನೆ ಪಿ-12 | ಸ್ವತ್ತು ಬಿಡುಗಡೆ ಮಹಜರ್ |
| ನಿಶಾನೆ ಪಿ-12(ಎ) | ಸಹಿ |

| | |
|---|---|
| ನಿಶಾನೆ ಪಿ-13 ಮತ್ತು 14 | ಫೋಟೋಗಳು |
| ನಿಶಾನೆ ಪಿ-21 ಮತ್ತು 22 | ಫೋಟೋಗಳು |
| ನಿಶಾನೆ ಪಿ-15 | ವಾಹನ ಬಿಡುಗಡೆ ಮಹಜರ್ |
| ನಿಶಾನೆ ಪಿ-15(ಎ) | ಸಹಿ |
| ನಿಶಾನೆ ಪಿ-16-19 | ಫೋಟೋಗಳು |
| ನಿಶಾನೆ ಪಿ-20 | ವಾಹನ ಬಿಡುಗಡೆ ಮಹಜರ್ |
| ನಿಶಾನೆ ಪಿ-20(ಎ) | ಸಹಿ |
| ನಿಶಾನೆ ಪಿ-21 ಮತ್ತು 22 | ಫೋಟೋಗಳು |
| ನಿಶಾನೆ ಪಿ-23 | ಮೊಬೈಲ್ ಬಿಡುಗಡೆ ಮಹಜರ್ |
| ನಿಶಾನೆ ಪಿ-23(ಎ) | ಸಹಿ |
| ನಿಶಾನೆ ಪಿ-24 | ಫೋಟೋ |
| ನಿಶಾನೆ ಪಿ-25 | ಮೊಬೈಲ್ ಬಿಡುಗಡೆ ಮಹಜರ್ |
| ನಿಶಾನೆ ಪಿ-25(ಎ) | ಸಹಿ |
| ನಿಶಾನೆ ಪಿ-26 | ಫೋಟೋ |
| ನಿಶಾನೆ ಪಿ-27 | ಮೊಬೈಲ್ ಬಿಡುಗಡೆ ಮಹಜರ್ |
| ನಿಶಾನೆ ಪಿ-27(ಎ) | ಸಹಿ |
| ನಿಶಾನೆ ಪಿ-28 | ಫೋಟೋ |
| ನಿಶಾನೆ ಪಿ-29 | ಮೊಬೈಲ್ ಬಿಡುಗಡೆ ಮಹಜರ್ |
| ನಿಶಾನೆ ಪಿ-29(ಎ) | ಸಹಿ |
| ನಿಶಾನೆ ಪಿ-30 | ಫೋಟೋ |
| ನಿಶಾನೆ ಪಿ-31 | ಮೊಬೈಲ್ ಬಿಡುಗಡೆ ಮಹಜರ್ |
| ನಿಶಾನೆ ಪಿ-31(ಎ) | ಸಹಿ |
| ನಿಶಾನೆ ಪಿ-32 | ಫೋಟೋ |
| ನಿಶಾನೆ ಪಿ-33 | ಮೊಬೈಲ್ ಬಿಡುಗಡೆ ಮಹಜರ್ |
| ನಿಶಾನೆ ಪಿ-33(ಎ) | ಸಹಿ |
| ನಿಶಾನೆ ಪಿ-34 | ಫೋಟೋ |
| ನಿಶಾನೆ ಪಿ-35 | ಮೊಬೈಲ್ ಬಿಡುಗಡೆ ಮಹಜರ್ |
| ನಿಶಾನೆ ಪಿ-35(ಎ) | ಸಹಿ |
| ನಿಶಾನೆ ಪಿ-36 | ಫೋಟೋ |

Visit **ecourts.gov.in** for updates or download mobile app "**eCourts Services**" from Android or iOS

| | |
|---|---|
| ನಿಶಾನೆ ಪಿ-37 | ಮೊಬೈಲ್ ಬಿಡುಗಡೆ ಮಹಜರ್ |
| ನಿಶಾನೆ ಪಿ-37(ಎ) | ಸಹಿ |
| ನಿಶಾನೆ ಪಿ-38 | ಫೋಟೋ |
| ನಿಶಾನೆ ಪಿ-39 | ಮೊಬೈಲ್ ಬಿಡುಗಡೆ ಮಹಜರ್ |
| ನಿಶಾನೆ ಪಿ-39(ಎ) | ಸಹಿ |
| ನಿಶಾನೆ ಪಿ-40 | ಫೋಟೋ |
| ನಿಶಾನೆ ಪಿ-41 | ಮೊಬೈಲ್ ಬಿಡುಗಡೆ ಮಹಜರ್ |
| ನಿಶಾನೆ ಪಿ-41(ಎ) | ಸಹಿ |
| ನಿಶಾನೆ ಪಿ-42 | ಫೋಟೋ |
| ನಿಶಾನೆ ಪಿ-43 | ಮೊಬೈಲ್ ಬಿಡುಗಡೆ ಮಹಜರ್ |
| ನಿಶಾನೆ ಪಿ-43(ಎ) | ಸಹಿ |
| ನಿಶಾನೆ ಪಿ-44 | ಫೋಟೋ |
| ನಿಶಾನೆ ಪಿ-45 | ಮೊಬೈಲ್ ಬಿಡುಗಡೆ ಮಹಜರ್ |
| ನಿಶಾನೆ ಪಿ-45(ಎ) | ಸಹಿ |
| ನಿಶಾನೆ ಪಿ-46 | ಫೋಟೋ |
| ನಿಶಾನೆ ಪಿ-47 | ಮೊಬೈಲ್ ಬಿಡುಗಡೆ ಮಹಜರ್ |
| ನಿಶಾನೆ ಪಿ-47(ಎ) | ಸಹಿ |
| ನಿಶಾನೆ ಪಿ-48 | ಫೋಟೋ |
| ನಿಶಾನೆ ಪಿ-49 | ಮಹಜರ್ |
| ನಿಶಾನೆ ಪಿ-49(ಎ) | ಸಹಿ |
| ನಿಶಾನೆ ಪಿ-50 | ಫೋಟೋ |
| ನಿಶಾನೆ ಪಿ-51 | ಮೊಬೈಲ್ ಬಿಡುಗಡೆ ಮಹಜರ್ |
| ನಿಶಾನೆ ಪಿ-51(ಎ) | ಸಹಿ |
| ನಿಶಾನೆ ಪಿ-52 | ಫೋಟೋ |
| ನಿಶಾನೆ ಪಿ-53 | ಮಹಜರ್ |
| ನಿಶಾನೆ ಪಿ-53(ಎ) | ಸಹಿ |
| ನಿಶಾನೆ ಪಿ-54 | ಫೋಟೋ |
| ನಿಶಾನೆ ಪಿ-55 | ವಾಹನ ಬಿಡುಗಡೆ ಮಹಜರ್ |
| ನಿಶಾನೆ ಪಿ-55(ಎ) | ಸಹಿ |

Visit **ecourts.gov.in** for updates or download mobile app "**eCourts Services**" from Android or iOS

| | |
|---|---|
| ನಿಶಾನೆ ಪಿ-56-57 | ಫೋಟೋಗಳು |
| ನಿಶಾನೆ ಪಿ-58 | ದೃಡೀಕರಣ |
| ನಿಶಾನೆ ಪಿ-58(ಎ) | ಸಹಿ |
| ನಿಶಾನೆ ಪಿ-59 | ಪ್ರ.ವ.ವರದಿ |
| ನಿಶಾನೆ ಪಿ-59(ಎ) | ಸಹಿ |
| ನಿಶಾನೆ ಪಿ-60 | ಪಂಚತಂತ್ರ |
| ನಿಶಾನೆ ಪಿ-60(ಎ) | ಸಹಿ |

**ಆರೋಪಿತರ ಪರವಾಗಿ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿಃ**

**- ಇಲ್ಲ -**

**ಆರೋಪಿತರ ಪರವಾಗಿ ಗುರ್ತಿಸಿದ ದಾಖಲೆಗಳ ಪಟ್ಟಿಃ**

**- ಇಲ್ಲ -**

**ಅಭಿಯೋಜನೆಯವರ ಪರವಾಗಿ ಗುರ್ತಿಸಿದ ಮುದ್ದೆಮಾಲುಗಳ ಪಟ್ಟಿಃ**

ಮುದ್ದೆ ಮಾಲು 1 ಃ ರೂ.10/- ಮುಖಬೆಲೆಯ 32 ನೋಟುಗಳು
ರೂ.20/- ಮುಖಬೆಲೆಯ 21 ನೋಟುಗಳು
ರೂ.50/- ಮುಖಬೆಲೆಯ 12 ನೋಟುಗಳು
ರೂ.100/- ಮುಖಬೆಲೆಯ 66 ನೋಟುಗಳು
ರೂ.200/- ಮುಖಬೆಲೆಯ 16 ನೋಟುಗಳು
ರೂ.500/- ಮುಖಬೆಲೆಯ 1086 ನೋಟುಗಳು

ಮುದ್ದೆ ಮಾಲು 2ಃ 52 ಇಸ್ಪೀಟ್ ಎಲೆಗಳು

ಮುದ್ದೆ ಮಾಲು 3 ಃ 8 ಮೊಬೈಲ್ ಗಳು

M N NANDINI
Digitally signed by M N NANDINI
Date: 2026.04.01 17:01:59 +0530

ಸಹಿ/- 25.03.2026
**(ಶ್ರೀಮತಿ ನಂದಿನಿ.ಎಂ.ಎನ್)**
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕೊಪ್ಪ

Visit **ecourts.gov.in** for updates or download mobile app “**eCourts Services**” from Android or iOS